ಹೊಸ ಚಿಗುರು
ಹಳೆ ಬೇರು
ಕೂಡಿರಲು
ಮರ ಸೊಬಗು

# ಡಿಂಡಿಮ

DINDIMA

ವಿದ್ಯಾರಣ್ಯ ಕನ್ನಡ ಕೂಟದ ದ್ವೈಮಾಸಿಕ ಪತ್ರಿಕೆ • A bimonthly newsletter of Vidyaranya Kannada Kuta

ಸಂಪುಟ ೧ • ಸಂಚಿಕೆ ೪ | http://www.VidyaranyaKannadaKuta.org | ಜುಲೈ – ಆಗಸ್ಟ್ ೨೦೦೭

ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ. ತಾಯ್ನಾಡ ಜಯಭೇರಿ ನಾವಾದೆವೆನ್ನಿ

## ಕಾರ್ಯಚಟುವಟಿಕೆಗಳ ವರದಿ

◆ ಅರುಣ್ ಮೂರ್ತಿ

ಜೂನ್ 10ರಂದು ಪ್ರದರ್ಶಿತವಾದ **'ಮುಂಗಾರು ಮಳೆ'** ಚಲನಚಿತ್ರದ ನಂತರ ಬೇಸಿಗೆ ರಜೆ ಕಾರಣದಿಂದಾಗಿ ಜೂನ್ ಮತ್ತು ಜುಲೈ ತಿಂಗಳಲ್ಲಿ ವಿದ್ಯಾರಣ್ಯ ಕನ್ನಡಕೂಟದ ಚಟುವಟಿಕೆಗಳು ಮಂದಗತಿಯಲ್ಲಿ ಸಾಗಿ ಹೆಚ್ಚು ಕಡಿಮೆ ಸ್ಥಗಿತಗೊಂಡಂತೆ ಕಂಡು ಬಂದರೂ ಕೂಟದ ಕಾರ್ಯಕಾರಿ ಸಮಿತಿ ಮುಂಬರುವ ಕಾರ್ಯಕ್ರಮಗಳನ್ನು ಆಯೋಜಿಸಿ ಕಾರ್ಯರೂಪಕ್ಕೆ ತರುವಲ್ಲಿ ನಿರತವಾಗಿತ್ತು. **'ಮುಂಗಾರು ಮಳೆ'** ಚಿತ್ರದ ಪುನಃ ಪ್ರದರ್ಶನದೊಂದಿಗೆ ಉಳಿದ ವಾರ್ಷಿಕ ಮತ್ತು ಇತರೆ ಕಾರ್ಯ ಚಟುವಟಿಕೆಗಳಿಗೆ ನಾಂದಿ ಹಾಡಲಾಯಿತು.

### 'ಮುಂಗಾರು ಮಳೆ'

ಶಿಕಾಗೋ ವಲಯದ ಅನೇಕ ಕನ್ನಡಿಗರ ಬೇಡಿಕೆ ಮೇರೆಗೆ **'ಮುಂಗಾರು ಮಳೆ'** ಕನ್ನಡ ಚಲನಚಿತ್ರವನ್ನು ಜುಲೈ 22ರಂದು ವುಡ್‌ರಿಜ್‌ನ ಸಿನಿಮಾರ್ಕ್ ಥಿಯೆಟರ್‌ನಲ್ಲಿ ಪುನಃ ಪ್ರದರ್ಶಿಸಲಾಯಿತು. ಮಕ್ಕಳು ಸೇರಿ ಸುಮಾರು 169 ಮಂದಿ ಆ ದಿನ ಈ ಚಿತ್ರವನ್ನು ಆನಂದಿಸಿದರು. ಈ ಚಿತ್ರವನ್ನು ಬೆಳಗ್ಗೆ 9:15ಕ್ಕೆ ಪ್ರದರ್ಶಿಸಬೇಕಾಗಿ ಬಂದರೂ ಅನೇಕ ಕನ್ನಡಿಗರು 8:45ಕ್ಕೆ ಥಿಯೆಟರ್ ಬಳಿ ಹಾಜರಿದ್ದದ್ದು ಈ ಚಿತ್ರದ ಜನಪ್ರಿಯತೆಗೆ ಸಾಕ್ಷಿಯಾಗಿತ್ತು. ಒಂದೇ ಚಿತ್ರವನ್ನು ಎರಡು ಬಾರಿ ಪ್ರದರ್ಶಿಸಿರುವುದು ಒಂದು ವಿಶೇಷವಾದರೆ, ವೆಬ್‌ಸೈಟ್ ಮೂಲಕ ಪ್ರಥಮ ಬಾರಿಗೆ ಮುಂಗಡ ಬುಕ್ಕಿಂಗ್ ವ್ಯವಸ್ಥೆ ಮಾಡಿದ್ದು ಮತ್ತೊಂದು ವಿಶೇಷವಾಗಿತ್ತು. ಅನೇಕರು ಈ ಅವಕಾಶವನ್ನು ಉಪಯೋಗಿಸಿಕೊಂಡು ಮುಂಗಡ ಟಿಕೆಟ್ ಖರೀದಿಸಿ, ಕಾರ್ಯಕಾರಿ ಸಮಿತಿಯ ಈ ಪ್ರಯೋಗ ಯಶಸ್ವಿಯಾಗಲು ಕಾರಣರಾದರು. ಕಾರ್ಯಕಾರಿ ಸಮಿತಿಯವರು ಚಿತ್ರ ಪ್ರದರ್ಶನದ ಸಂಯೋಜನೆಯನ್ನು ಮತ್ತೊಮ್ಮೆ ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲು ಸಹಾಯಕರಾದರು.

### ವನವಿಹಾರ

ಕನ್ನಡ ಕೂಟದ **ವಾರ್ಷಿಕ ವನಭೋಜನ**ವನ್ನು ಆಗಸ್ಟ್ 11ರಂದು ಏರ್ಪಡಿಸಲಾಗಿದ್ದು, ಸುಮಾರು 400 ಮಂದಿ ಆಗಮಿಸಿ, ದಿನದ ಅನೇಕ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಇದರ ಬಗೆಗಿನ ವರದಿಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ (ಪುಟ 3). ಈ ಪಿಕ್‌ನಿಕ್‌ನ ಚಿತ್ರಗಳನ್ನು ಕೂಟದ ವೆಬ್‌ಸೈಟ್‌ನಲ್ಲಿ ಇರಿಸಲಾಗಿದೆ.

### ಯೂತ್ ನೈಟ್

ವನಭೋಜನದ ಮರುವಾರವೇ ಕೂಟದ ಯುವ ಸಮಿತಿಯು **ಯೂತ್ ನೈಟ್** ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಆಗಸ್ಟ್ 18ರಂದು ನಡೆದ ಈ ಕಾರ್ಯಕ್ರಮದಲ್ಲಿ ಕೂಟದ ಯುವ ಸದಸ್ಯರು ವಿವಿಧ ರೀತಿಯ ಭಾರತೀಯ ಹಾಡು, ನೃತ್ಯ, ಹಾಸ್ಯ ಮುಂತಾದ ಕಾರ್ಯಕ್ರಮಗಳ ಮೂಲಕ ಆಗಮಿಸಿದ್ದ ಅನೇಕರನ್ನು ರಂಜಿಸಿ, 60 ವರ್ಷಗಳ ಸ್ವಾತಂತ್ರ್ಯವನ್ನು ಆಚರಿಸುತ್ತಿರುವ ತಾಯ್ನಾಡಿಗೆ ತಮ್ಮ ಗೌರವ ಮತ್ತು ನಮನಗಳನ್ನು ಸಲ್ಲಿಸಿದ್ದಲ್ಲದೆ, ತಮ್ಮದೇ ಆದ ರೀತಿಯಲ್ಲಿ

(ಪುಟ 5 ರಲ್ಲಿ ಮುಂದುವರೆದಿದೆ)



'ಯೂತ್ ನೈಟ್'ನ ಕೆಲವು ಚಿತ್ರಗಳು
(ಚಿತ್ರಗಳು: ಶ್ರೀನಿವಾಸ ರಾವ್)

## ಈ ಸಂಚಿಕೆಯಲ್ಲಿ


| | |
|---|---|
| ೧ | ಕಾರ್ಯಚಟುವಟಿಕೆಗಳ ವರದಿ |
| ೨ | ಸಂಪಾದಕೀಯ |
| ೨ | ಕಾರ್ಯಕ್ರಮಗಳ ಪಟ್ಟಿ |
| ೩ | ವರದಿ: ವನವಿಹಾರದ ಸಂಭ್ರಮ |
| ೪ | Picnic Pic(k)s |
| ೫ | Beat the heat |
| ೫ | Thank you note |
| ೬ | ಅಂತರ್ಜಾಲದಲ್ಲಿನ ಕನ್ನಡ ತಾಣಗಳು |
| ೬ | ಸಂಗಮ ಮುಖಪುಟ ಚಿತ್ರಕ್ಕೆ ಆಹ್ವಾನ! |
| ೬ | In a Nutshell |
| ೭ | ಬಳೆ – ಧಾರಾವಾಹಿ |
| ೧೦ | Kannada Kuta & Charity |
| ೧೧ | Program Announcements |
| ೧೧ | ನಿಮಗಿದು ಗೊತ್ತೆ? |
| ೧೨ | ಹೊಸ ರುಚಿ |
| ೧೨ | ಎದೆ ತುಂಬಿ ಹಾಡಿದೆನು |
| ೧೨ | Membership Info |
| ೧೨ | ನಗೆ ಬುಗ್ಗೆ |
| ೧೨ | ಕೊನೆ ಸಿಡಿ! |


Inside this issue

### Upcoming Programs

**Movie: SIRIVANTHA**

Sunday, Sep 9, 2007, Cinemark, Woodbridge

**Open Forum**

Sunday, Sep 16, 2007, HTGC, Lemont

## ಸಂಪಾದಕೀಯ

ವರ್ಷದ ಎರಡನೆಯ ಭಾಗದ ಕೂಟದ ಕಾರ್ಯ ಚಟುವಟಿಕೆಗಳು ಭರದಿಂದ ಸಾಗುತ್ತಿರುವುದನ್ನು ನಾವೆಲ್ಲಾ ಕಾಣುತ್ತಿದ್ದೇವೆ. ಇದರಿಂದಾಗಿ ಸದಸ್ಯರು, ಕೂಟದ ಕಾರ್ಯಕಲಾಪಗಳ ಬಗ್ಗೆ ಆಸಕ್ತಿ ತೋರಿ ಹೆಚ್ಚು ವಿವರಗಳನ್ನು ತಿಳಿದುಕೊಳ್ಳುವ ತವಕದಲ್ಲಿರಬಹುದು. ಹಾಗಿದ್ದಲ್ಲಿ, ಈ ಕೆಲ ವಾರಗಳ ಕಾರ್ಯ ಚಟುವಟಿಕೆಗಳ ವರದಿಯನ್ನು ಹಾಗು ಮುಂಬರುವ ಕಾರ್ಯಕ್ರಮಗಳ ಬಗೆಗಿನ ಮಾಹಿತಿಯನ್ನು ಸಾಧ್ಯವಾದಷ್ಟು ಈ ಸಂಚಿಕೆಯಲ್ಲಿ ನೀಡಿದ್ದೇವೆ.

**ಡಿಂಡಿಮ** ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿ ಹೊತ್ತಿದ್ದ ಶ್ರೀಮತಿ ಉಮಾ ರಾವ್ ಅವರು ಇತರೆ ಹೊಣೆಗಳು ಹಾಗು ಸಮಯ ಅಭಾವದಿಂದಾಗಿ ಸದ್ಯಕ್ಕೆ ಆ ಜವಾಬ್ದಾರಿಯಿಂದ ಹಿಂದೆ ಸರಿದಿದ್ದಾರೆ. ಅವರು ಈ ಪತ್ರಿಕೆಗೆ ರೂಪು ರೇಷೆಗಳನ್ನು ನೀಡುವಲ್ಲಿ ಹಾಗು ಕಳೆದ ಮೂರು ಸಂಚಿಕೆಗಳನ್ನು ಹೊರಡಿಸುವಲ್ಲಿ ನೀಡಿದ ಸಹಾಯಕ್ಕೆ **ಡಿಂಡಿಮ** ಮತ್ತು ಪ್ರಚಾರ ಸಮಿತಿಯ ಪರವಾಗಿ ಅವರಿಗೆ ನನ್ನ ವಂದನೆಗಳು.

ಹಿಂದಿನ ಹಾಗು ಈ ಸಂಚಿಕೆಗೆ ವರದಿಗಳನ್ನು ಬರೆದು ಕಳುಹಿಸಿದ ಶ್ರೀಮತಿ ತ್ರಿವೇಣಿ ಶ್ರೀನಿವಾಸರಾವ್ ಅವರಿಗೆ ನಮ್ಮ ವಂದನೆಗಳು. ಹಾಗೆ **'ಬಲೆ'** ಕಥೆಯ ಮೊದಲ ಭಾಗವನ್ನು ಶ್ರೀ ಜಗನ್ನಾಥ್ ನಾಯಕ್ ಅವರು, ಸ್ವಾರಸ್ಯಕರವಾಗಿ ಬರೆದು ಕಳುಹಿಸಿದ್ದಾರೆ. ಕೂಟದ ಅತ್ಯಂತ ಹಿರಿಯ ಸದಸ್ಯರಾದ ಇವರು ಅತ್ಯುತ್ಸಾಹದಿಂದ ಮುಂದೆ ಬಂದು ಮೊದಲನೆಯ ಭಾಗವನ್ನು ತಾನೇ ಬರೆಯುವೆನೆಂದು ತಿಳಿಸಿದ್ದು ಕೂಟದ ಸದಸ್ಯತ್ವ ನಮಗಿತ್ತ ಮತ್ತೊಂದು ಪ್ರೋತ್ಸಾಹವೆಂದು ಪರಿಗಣಿಸಿ, ನಮ್ಮ ಪ್ರಯತ್ನಗಳ ಸಾಫಲ್ಯತೆಯ ಚಿಕ್ಕ ಕುರುಹೆಂದು ಗುರುತಿಸಿದರೆ ತಪ್ಪಾಗಲಾರೆದೆನಿಸುತ್ತದೆ.

**ಅರುಣ್ ಮೂರ್ತಿ**

### Remaining Announced Events during 2007

The dates and locations for following events are confirmed. Details will be sent to members via email notifications.

| EVENT | DATE | TIME | LOCATION |
|---|---|---|---|
| Movie: Sirivantha | Sept. 9, 2007 | 10:00 AM | Cinemark @ 7 bridges |
| Open Forum | Sept. 16, 2007 | 3:00 PM | HTGC, Lemont |
| Ganesha Chathurthi | Sept. 22, 2007 | 4:30 PM | HTGC, Lemont |
| Dasa Day | October 27, 2007 | TBD | HTGC, Lemont |
| Rajyothsava/Deepavali | December 1, 2007 | TBD | HTGC, Lemont |

### 'In the works' Events

VKK is working on arranging the events listed below. Once confirmed, members will be notified with event details.

| EVENT | DATE | TIME | LOCATION |
|---|---|---|---|
| Movie: Mataad Mataad Mallige | TBD | TBD | Cinemark @ 7 bridges |
| Dance Drama: Roopa Iyer & Group | Oct. 7, 2007 | 4:00 PM | HTGC, Lemont |
| VKK Day | TBD | TBD | HTGC, Lemont |


# ಡಿಂಡಿಮ

ಸಂಪುಟ ೧ • ಸಂಚಿಕೆ ೪
ಜುಲೈ – ಆಗಸ್ಟ್ ೨೦೦೭

ವಿದ್ಯಾರಣ್ಯ ಕನ್ನಡ ಕೂಟದ
ದ್ವೈಮಾಸಿಕ ಪತ್ರಿಕೆ



The views and opinions expressed herein are those of the respective authors. They do not reflect the views and opinions of the Executive Committee members of Vidyaranya Kannada Kuta or the Editors of Dindima



**Contact email:**
dindima@vidyaranyakannadakuta.org



ವಿದ್ಯಾರಣ್ಯ ಕನ್ನಡ ಕೂಟ
ಇಲಿನಾಯ್, ಯು.ಎಸ್.ಎ

Vidyaranya Kannada Kuta
Illinois, U.S.A.



**EXECUTIVE COMMITTEE**

**President**
Datta Ajjampur
**Vice President**
Arun Murthy
**Secretary**
Ramesh Rangasham
**Joint Secretary**
Suma Rajashankar
**Treasurer**
Bhima Rao
**Joint Treasurer**
Asha Baskar
**Members**
Lakshman Mittur
Lingaraju Shivamurthiah
Parimala Prasad
Radha Rao
Sudhir Kota

**DINDIMA Newsletter Editor**
Arun Murthy



**Yahoo! Groups:**
VIDYARANYAKANNADAKUTA
**Website:**
VIDYARANYAKANNADAKUTA.org

# ವಿದ್ಯಾರಣ್ಯದ ವನವಿಹಾರ ಸಂಭ್ರಮ ಹೇಗಿತ್ತು ಗೊತ್ತಾ?

◈ ತ್ರಿವೇಣಿ ಶ್ರೀನಿವಾಸರಾವ್, ಹ್ಯಾನೋವರ್ ಪಾರ್ಕ್

ಆಗಸ್ಟ್ ೧೧ರ ಶನಿವಾರ 'ಬಸಿ ವುಡ್ಸ್' ಸಂರಕ್ಷಿತ ಅರಣ್ಯ ಪ್ರದೇಶದ ತುಂಬೆಲ್ಲಾ ಕನ್ನಡ ಕಲರವ. ಅಂದು ವಿದ್ಯಾರಣ್ಯ ಕನ್ನಡಕೂಟದ ವಾರ್ಷಿಕ ವನವಿಹಾರದ ಮೋಜಿನ ದಿನ!

ಚಳಿಗಾಲ ಕಳೆದು ಬೇಸಿಗೆ ಶುರುವಾದೊಡನೆ ಕೊರೆಯುವ ಶೀತ, ಸುರಿಯುವ ಮಂಜಿನ ಹಾವಳಿಯಿಂದ ಬೇಸತ್ತ ಅಮೆರಿಕ ಜನರಲ್ಲಿ ಹೊಸ ಉತ್ಸಾಹ ಸಂಚಾರವಾಗುತ್ತದೆ. ಬಹಳಷ್ಟು ಕನ್ನಡ ಕೂಟಗಳಿಗೆ ಆಗ ವನಭೋಜನದ ಸಂಭ್ರಮ. ಅದರಂತೆ ವಿದ್ಯಾರಣ್ಯ ಕನ್ನಡಕೂಟವೂ ತಪ್ಪದೆ ವಾರ್ಷಿಕ ವನವಿಹಾರವನ್ನು ನಡೆಸಿಕೊಂಡು ಬಂದಿದೆ. ಪ್ರತಿವರ್ಷ ಜುಲೈ ತಿಂಗಳಿನಲ್ಲಿ ನಡೆಯುತ್ತಿದ್ದ ಪಿಕ್ನಿಕ್ ಈ ಬಾರಿ ಆಗಸ್ಟ್ ತಿಂಗಳಿಗೆ ಮುಂದೂಡಲ್ಪಟ್ಟಿತ್ತು. ಜುಲೈನಲ್ಲಿ ವಾತಾವರಣದ ಉಷ್ಣಾಂಶ ತಾರಕಕ್ಕೇರುವುದರಿಂದ ಈ ಬಾರಿ ಕಾರ್ಯಕ್ರಮದಲ್ಲಿ ಸಣ್ಣ ಬದಲಾವಣೆ ಮಾಡಿಕೊಂಡಿದ್ದು, ಜುಲೈ ಬದಲಾಗಿ ಆಗಸ್ಟ್‌ನಲ್ಲಿ ವನವಿಹಾರ ಏರ್ಪಾಡಾಗಿತ್ತು.

ಶನಿವಾರ ಬೆಳಗ್ಗೆ ವಿದ್ಯಾರಣ್ಯ ಕನ್ನಡಕೂಟದ ವಿವಿಧ ಸಮಿತಿಗಳ ಸದಸ್ಯರು ಮುಂಚಿತವಾಗಿಯೇ ಸ್ಥಳದಲ್ಲಿ ಹಾಜರಿದ್ದು ಅಗತ್ಯವಿದ್ದ ಎಲ್ಲಾ ವ್ಯವಸ್ಥೆಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದರು. ಹನ್ನೊಂದು ಘಂಟೆಯ ನಂತರ ಒಬ್ಬೊಬ್ಬರಾಗಿ ಆಗಮಿಸಿದ ಸದಸ್ಯರ ಉಪಹಾರಕ್ಕೆಂದು ಬ್ರೆಡ್ ಸ್ಯಾಂಡ್‌ವಿಚ್, ಬರ್ಗರ್‌ಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಮುಸುಕಿನ ಜೋಳ, ಬಿಸಿಬಿಸಿ ಚಿಕನ್ ತುಂಡುಗಳು ಗ್ರಿಲ್‌ನಲ್ಲಿ ತಯಾರಾಗುತ್ತಿದ್ದವು. ಕೋಕ್, ಪೆಪ್ಸಿ ಮುಂತಾದ ಪಾನೀಯಗಳ ಜೊತೆಗೆ ಅಂದವಾಗಿ ಕತ್ತರಿಸಿಟ್ಟಿದ್ದ ಕಲ್ಲಂಗಡಿ, ಕರಬೂಜ ಹಣ್ಣುಗಳು ಮನಸೆಳೆಯುವಂತಿದ್ದವು.

ಇವುಗಳ ಜೊತೆಗೆ ಈ ಬಾರಿಯ ವಿಶೇಷವೆಂದರೆ ತಂಪಾದ ಮಸಾಲ ಮಜ್ಜಿಗೆ! ಉರಿಬಿಸಿಲಿನ ತಾಪಕ್ಕೆ ರಾಮಬಾಣದಂತಿದ್ದ ಈ ನೀರು ಮಜ್ಜಿಗೆಗಂತೂ ಭಾರಿ ಡಿಮ್ಯಾಂಡು ಕಂಡು ಬರುತ್ತಿತ್ತು. ಶುಂಠಿ, ಕರಿಬೇವು, ಕೊತ್ತುಂಬರಿ ಸೊಪ್ಪುಗಳಿಂದ ಸಿಂಗಾರಗೊಂಡಿದ್ದ ಈ ಮಜ್ಜಿಗೆ ಕೆಲವರಿಗೆ ರಾಮನವಮಿ ದಿನವನ್ನು ನೆನಪಿಸಿತು. ಕಡಿಮೆ ಕ್ಯಾಲೊರಿ, ಬಾಯಿಗೆ ರುಚಿ, ದೇಹಕ್ಕೂ ತಂಪು ನೀಡುವ ನಮ್ಮೂರಿನ ನೀರು ಮಜ್ಜಿಗೆಗೆ ಅಂದು ಎಲ್ಲರೂ ಜೈ! ಜೈ! ಎನ್ನುವವರೇ!

ಜೋಳ, ಚಿಕನ್, ಸ್ಯಾಂಡ್‌ವಿಚ್‌ಗಳು ಹೊಟ್ಟೆ ಸೇರಿದೊಡನೆ ಸದಸ್ಯರ ಗಮನ ಆಟದತ್ತ ಹರಿಯಿತು. ಮೂರು ಕಾಲಿನ ಓಟ, ನಿಂಬೆ ಮತ್ತು ಚಮಚ, ವಾಲಿಬಾಲ್, ಬ್ಯಾಡ್ಮಿಂಟನ್ ಆಟಗಳಿದ್ದವು. ಚಿಕ್ಕಮಕ್ಕಳಿಗೆ ಮತ್ತು ದೊಡ್ಡವರಿಗೆ ಪ್ರತ್ಯೇಕವಾಗಿದ್ದ ಈ ಆಟಗಳಲ್ಲಿ ಹಲವಾರು ಸದಸ್ಯರು ಉತ್ಸಾಹದಿಂದ ಭಾಗವಹಿಸಿ, ಬಹುಮಾನಗಳನ್ನು ಪಡೆದುಕೊಂಡರು.

ಆಟ ಆಡುತ್ತಾ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಆಗಲೇ ಊಟದ ಹೊತ್ತಾಗಿಹೋಗಿತ್ತು. ಮಧ್ಯಾಹ್ನದ ಊಟಕ್ಕೆ ವಿದ್ಯಾರಣ್ಯದ ಸದಸ್ಯರು ತಯಾರಿಸಿ ತಂದಿದ್ದ ನಿಂಬೆ ಚಿತ್ರಾನ್ನ, ಮೊಸರನ್ನಗಳಿದ್ದವು. ಚಿಪ್ಸ್, ಉಪ್ಪಿನಕಾಯಿಗಳೂ ಜೊತೆಗೂಡಿದ ಸೊಗಸಾದ ಭೋಜನ. ಆಡಿ ದಣಿದಾಗ ಊಟ. ಊಟ ಸಾಕಾದಾಗ ಅದನ್ನು ಅರಗಿಸಲು ಮತ್ತೆ ಆಟ. ಪಿಕ್‌ನಿಕ್ ಮಜಾ ಅಂದರೆ ಇದೇ. ಏಕೆಂದರೆ ಬರುವ ಸದಸ್ಯರೆಲ್ಲರೂ ಅಂದು ಅರಾಮದ ಮೂಡಿನಲ್ಲಿರುತ್ತಾರೆ. ಕೆಲವರಿಗೆ ಹರಟೆ ಹೊಡೆಯಲು ಒಳ್ಳೆಯ ಅವಕಾಶ ಸಿಗುತ್ತದೆ. ಕೆಲವರು ಆಟ ಆಡುತ್ತಾರೆ, ಕೆಲವರು ಬರೀ ನೋಡುತ್ತಾರೆ, ಕೆಲವರು ಊಟ ಮಾಡಿಕೊಂಡು ಹಾಯಾಗಿ ಮರದ ನೆರಳಿನಲ್ಲಿ ಕುಳಿತುಕೊಳ್ಳಲು ಬಯಸುತ್ತಾರೆ.

ಊಟ ಆದ ಮೇಲೆ ಇನ್ನೆಂತಹ ಆಟ ಎಂದು ಸುಮ್ಮನೆ ಕೂತಿದ್ದವರನ್ನೆಲ್ಲಾ ಎಬ್ಬಿಸಿ ಸಂಗೀತ ಕುರ್ಚಿ ಆಟ ಪ್ರಾರಂಭಿಸಿದರು. ಸಂಗೀತ ಕುರ್ಚಿ ಆಟದ ವಿಶೇಷವೇನೆಂದರೆ, ಅಲ್ಲಿ ಕುರ್ಚಿಗಳೇ ಇರಲಿಲ್ಲ, ಬದಲಿಗೆ ಕಂಬಗಳಿದ್ದವು! ಅಂದರೆ ವಿದ್ಯಾರಣ್ಯದ ಸದಸ್ಯರನ್ನೇ ಕಂಬಗಳಂತೆ ನಿಲ್ಲಿಸಿ ಸೊಗಸಾಗಿ ಆಟವನ್ನು ನಿರ್ವಹಿಸಲಾಯಿತು. ಈ ಬಾರಿ ಮಕ್ಕಳಿಗೆಂದು ಇಂಗ್ಲಿಷ್ ಪದಗಳಿಗೆ ಕನ್ನಡದ ಪರ್ಯಾಯ ಪದಗಳನ್ನು ಹೇಳಿಸುವ "ರಸಪ್ರಶ್ನೆ" ಕಾರ್ಯಕ್ರಮವೂ ಇತ್ತು. ವಿದ್ಯಾರಣ್ಯದ ಅಧ್ಯಕ್ಷರಾದ ದತ್ತಮೂರ್ತಿಯವರು ಈ ರಸಪ್ರಶ್ನೆಯನ್ನು ನಡೆಸಿದರು. ಆದರೆ ಮಕ್ಕಳಿಗೆ ಮುಂಚಿತವಾಗಿ ಈ ಬಗ್ಗೆ ಸೂಚನೆ ನೀಡಿರಲಿಲ್ಲವಾದ್ದರಿಂದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಹೆಚ್ಚು ಮಕ್ಕಳು ಭಾಗವಹಿಸಲಾಗಲಿಲ್ಲ. ಮುಂದಿನ ದಿನಗಳಲ್ಲಿ ಈ ಆಟವನ್ನು ಮತ್ತಷ್ಟು ಜನಪ್ರಿಯಗೊಳಿಸಿದಲ್ಲಿ, ನಮ್ಮ ಎಳೆಯರ ಕನ್ನಡ ಪದ ಭಂಡಾರ ಮತ್ತಷ್ಟು ತುಂಬಿತುಳುಕೋದರಲ್ಲಿ ಸಂದೇಹವೇ ಇಲ್ಲ!

ಮತ್ತೆ ಕನ್ನಡಿಗರು ಅಂದ ಮೇಲೆ ಅಲ್ಲಿ ಕಾಫಿ ಇಲ್ಲದಿರುತ್ತದೆಯೇ? ಕಾಫಿ ಘಮಘಮ ಮೂಗಿಗೆ ತಲುಪಿದ್ದೇ ತಡ ಸದಸ್ಯರ ಗಮನ ಅತ್ತ ಹರಿಯಿತು. ಹದವಾಗಿ, ಬಿಸಿಬಿಸಿಯಾಗಿದ್ದ ಕಾಫಿಗೆ ಪೂರ್ಣ ಅಂಕಗಳು ದೊರೆತವು. ಅದೇ ಸಮಯಕ್ಕೆ ಸರಿಯಾಗಿ ಮರದ ಕೆಳಗೆ ಪಿನ್ಯಾಟ ಒಡೆಯುವ ಆಟ ಶುರುವಾಯಿತು. ವಿದ್ಯಾರಣ್ಯದ ಮಕ್ಕಳೆಲ್ಲಾ ಉತ್ಸಾಹದಿಂದ ಪಿನ್ಯಾಟ ಮೂತಿಗೆ ಬಡಿದಿದ್ದೇ ಬಡಿದಿದ್ದು. ಕೊನೆಗೂ ಅದು ಒಡೆದು ಹೊರಚೆಲ್ಲಿದ ಕ್ಯಾಂಡಿ, ಚಾಕಲೇಟ್, ಆಟಿಕೆಗಳಿಗೆ ಮಕ್ಕಳು ಮುಗಿಬಿದ್ದರು. ಇದು ಮಕ್ಕಳಿಗೆಲ್ಲ ಬಹಳ ಮುದ ನೀಡುವ ಆಟ. ಮಕ್ಕಳು ಖುಷಿಯಿಂದ ಕುಣಿದಾಡಿದಾಗ ನಮಗೂ ಸಂತೋಷವಾಯಿತು.

ಪಿಕ್ನಿಕ್‌ನ ಕಟ್ಟಕಡೆಯ ಕಾರ್ಯಕ್ರಮ ಅಂತ್ಯಾಕ್ಷರಿ. ಸಾಮಾನ್ಯವಾಗಿ ಅಂತ್ಯಾಕ್ಷರಿಗಳಲ್ಲಿ ಹಿಂದಿ ಹಾಡುಗಳ ಪ್ರಾಬಲ್ಯವೇ ಹೆಚ್ಚಾಗುವುದರಿಂದ, ಈ ಬಾರಿ ಅದನ್ನು ತಡೆಯಲು ಕೇವಲ ಕನ್ನಡ ಹಾಡುಗಳನ್ನೇ ಹಾಡಬೇಕೆಂಬ ನಿಬಂಧನೆ ವಿಧಿಸಲಾಗಿತ್ತು. ವಿದ್ಯಾರಣ್ಯದ ಸದಸ್ಯರದು ಒಂದು ತಂಡ, ಸದಸ್ಯೆಯರದು ಇನ್ನೊಂದು ತಂಡ. ಕನ್ನಡದಲ್ಲಿ ಹಾಡಿಗೇನು ಬರ? ಎರಡೂ ತಂಡದ ಸದಸ್ಯರು ಒಬ್ಬರಿಗೊಬ್ಬರು ಪೈಪೋಟಿಯಿಂದ ಹಾಡುಗಳನ್ನು ಹಾಡಿದರು. ಕೂಟದ ಹೊಸ ಸದಸ್ಯ ಕೆಂಪೇಗೌಡ ಉತ್ಸಾಹದಿಂದ ಕನ್ನಡದ ಸೂಪರ್ ಹಿಟ್ ಚಿತ್ರಗಳಾದ ಮುಂಗಾರು ಮಳೆ, ದುನಿಯಾ ಚಿತ್ರದ ಹಾಡುಗಳನ್ನು ಅವರು ಹಾಡಿದರು. ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ, ತೆರೆದಿದೆ ಮನೆ, ಯಾರೇ ಕೂಗಾಡಲಿ, ಹೆಜ್ಜೆ ಹೆಜ್ಜೆಗೂ, ರಾಣಿ ಜೇನು, ರಾಣಿ ಜೇನು ಬಂತು ನೋಡು, ನೀರ ಬಿಟ್ಟು ನೆಲದ ಮೇಲೆ, ಬಾಜಿ ಕಟ್ಟಿ ನೋಡು ಬಾರೊ ಮುಂತಾದ ಕನ್ನಡದ ಅಮರ ಮಧುರ ಚಿತ್ರಗೀತೆಗಳೆಲ್ಲಾ ಅಂದು ಸದಸ್ಯರ ಬಾಯಲ್ಲಿ ನಲಿದಾಡಿದವು.

ಸಂಜೆ ಆರು ಘಂಟೆಯ ಸುಮಾರಿಗೆ ನಮ್ಮ ಅಧ್ಯಕ್ಷರಾದ ದತ್ತಮೂರ್ತಿಯವರು ಎಲ್ಲರಿಗೂ ಧನ್ಯವಾದ ಅರ್ಪಿಸುವುದರೊಂದಿಗೆ ವನವಿಹಾರ ಮುಕ್ತಾಯವಾಯಿತು. ಅಲ್ಲಿ ಇಲ್ಲಿ ಬಿದ್ದಿದ್ದ ಕಸ, ಕಾಗದದ ತಟ್ಟೆ, ಲೋಟಗಳನ್ನೆಲ್ಲ ತೆಗೆದು ಸ್ವಚ್ಛಗೊಳಿಸಿದ್ದಾಯಿತು. ಆಮೇಲೆ ಒಬ್ಬರಿಗೊಬ್ಬರು ವಿದಾಯ ಹೇಳಿ ಎಲ್ಲರೂ ಮನೆಯ ಹಾದಿ ಹಿಡಿದೆವು. ಒಟ್ಟಿನಲ್ಲಿ, ಈ ಬಾರಿಯ ಪಿಕ್ನಿಕ್ ಎಲ್ಲರಿಗೂ ತುಂಬ ಮಜ ತಂದಿತು. ಜಾಲಿ ಜಾಲಿ ಪಿಕ್ನಿಕ್ ಇದು!

ನೀವು ಬಂದಿರಲಿಲ್ವಾ? ಅಯ್ಯೋ, ಒಳ್ಳೆಯದೊಂದು ಕಾರ್ಯಕ್ರಮ ಮಿಸ್ ಮಾಡಿಕೊಂಡುಬಿಟ್ರಿ. ಹೋಗಲಿ ಬಿಡಿ. ನಿಮಗಾಗಿ ಅಲ್ಲಿಯ ರಸನಿಮಿಷಗಳನ್ನು ಚಿತ್ರಗಳ ಅಲ್ಬಮ್‌ಅನ್ನು ಕೂಟದ ವೆಬ್‌ಸೈಟ್‌ನಲ್ಲಿ ಜೋಡಿಸಿ ಇಟ್ಟಿದ್ದೇವೆ. ಮುಂದಿನ ವನವಿಹಾರಕ್ಕೆ ಮಾತ್ರ ತಪ್ಪದೆ ಬನ್ನಿ.

◆◆◆

# PICNIC Pic(k)s

*We know a picture is worth a thousand words. Nevertheless, we decided to add a few of our own.*

(ಚಿತ್ರಗಳು ಮತ್ತು ಅಡಿಬರಹ: ಅರುಣ್ ಮೂರ್ತಿ)



‘ಯಾರು ಹಿತವರು, ಚಿಕನ್ನೋ, ಜೋಳವೋ, ತರಕಾರಿಯೋ?‘

Raj & other attendees seem to be eyeing at various barbequed items and deciding on what to eat first (*or next*)



‘ನಾ ಬಿದ್ದೆನಾದರೂ ಗೆದ್ದೆ’

The ladies laugh after a fall; having pulled the *tug-of-war* rope until it snapped & having proved they’re equally strong.



*‘Watch guys! This is how you hit a ball’*

Shwetha seems to show how to hit a ball *copybook style* as she returns the ball during a volleyball game.



‘ಇನ್ನೂ ಸ್ವಲ್ಪ ಉಂಟೇ?’. ‘ಖಂಡಿತಾ’

Many members, like Kalyani Prasad and Nagabhushan Rao, found a way to beat the heat with *majjige*



‘ಬೆಳ್ಳಗಿರುವುದೆಲ್ಲಾ ಹಾಲಲ್ಲ!

Kempegowda was going great guns during *Anthakshari* and many wanted to know what was in his drink



*‘Wake me up before you go’.*

After an active & hard day’s work and play, Hanumanth Rao was able to find just enough time to catch forty winks

(ಕಾರ್ಯಚಟುವಟಿಕೆಗಳ ವರದಿ – ಮೊದಲನೆ ಪುಟದಿಂದ)

ತಮ್ಮಲ್ಲಿರುವ ಭಾರತೀಯ ವ್ಯಕ್ತಿತ್ವವನ್ನು ಹಾಗು ಸಂಸ್ಕೃತಿಯನ್ನು ಕಲೆ ಮುಖಾಂತರ ಅಭಿವ್ಯಕ್ತಗೊಳಿ-ಸುವುದರಲ್ಲಿ ಯಶಸ್ವಿಯಾದರು. ಭೋಜನದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು. (ಯೂತ್ ನೈಟ್‌ನ ಪೂರ್ಣ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ಎದುರು ನೋಡಿ)

## ಮುಂಬರುವ ಕಾರ್ಯಕ್ರಮಗಳು

ಈಗಾಗಲೆ ತಿಳಿಸಿರುವಂತೆ ಸೆಪ್ಟೆಂಬರ್ ತಿಂಗಳಲ್ಲಿ, ಕನ್ನಡ ಚಲನಚಿತ್ರ **'ಸಿರಿವಂತ', 'ಮುಕ್ತ ವಿಚಾರ ವೇದಿಕೆ'** ಮತ್ತು **'ಗಣೇಶ ಹಬ್ಬ ಆಚರಣೆ'**ಯನ್ನು ಏರ್ಪಡಿಸಲಾಗಿದೆ.

- **ಸಿರಿವಂತ** ಚಲನಚಿತ್ರವನ್ನು (ಪ್ರದರ್ಶನ:ಸೆಪ್ಟೆಂಬರ್ 9) ಬೆಂಗಳೂರಿನ 'ರಾಕ್‌ಲೈನ್ ಪ್ರೊಡಕ್ಷನ್ಸ್'ನ ಶ್ರೀ ವೆಂಕಟೇಶ್ ಮತ್ತು ಶ್ರೀ ಭ್ರಮರೇಶ್‌ರವರು ನಮ್ಮ ಕೂಟಕ್ಕೆ ಉದಾರವಾಗಿ ನೀಡಿದ್ದಾರೆ. ಸದಸ್ಯ ಶ್ರೀ ಶಿವಮೂರ್ತಿ ಕಿಲಾರ ಅವರ ಪ್ರಯತ್ನದಿಂದಾಗಿ ದೊರೆತ ಈ ಚಿತ್ರವನ್ನು ಕೂಟದ ಅಧ್ಯಕ್ಷ ಶ್ರೀ ದತ್ತಮೂರ್ತಿ ಅವರು ಇತ್ತೀಚೆಗೆ ಬೆಂಗಳೂರಿಗೆ ರಜೆಗೆ ಹೋಗಿದ್ದಾಗ ಈ ಚಿತ್ರದ ನಿರ್ಮಾಪಕರನ್ನು ಭೇಟಿಯಾಗಿ ಚಿತ್ರವನ್ನು ತಮ್ಮೊಂದಿಗೆ ತಂದಿದ್ದಾರೆ.
- ಕೂಟದ 'ಹಂಗಾಮಿ' ಸಮಿತಿಯವರು ವಿದ್ಯಾರಣ್ಯ ಕನ್ನಡ ಕೂಟದ ಸಂವಿಧಾನಕ್ಕೆ ಪ್ರತಿಪಾದಿಸಿರುವ ತಿದ್ದುಪಡಿಗಳನ್ನು ಚರ್ಚಿಸಲು ಭಾನುವಾರ, ಸೆಪ್ಟೆಂಬರ್ 16, 2007, ರಾಮ ದೇವಾಲಯದಲ್ಲಿ **'ಮುಕ್ತ ವಿಚಾರ ವೇದಿಕೆ'**ಯನ್ನು ಏರ್ಪಾಡಿಸಲಾಗಿದೆ.
- ಕಾರ್ಯಕಾರಿ ಸಮಿತಿಯು **'ಗಣೇಶ ಹಬ್ಬ'** ಆಚರಿಸಲು ಸಿದ್ಧಗೊಳ್ಳುತ್ತಿದೆ. ಈ ಕಾರ್ಯಕ್ರಮದ ವಿವರಗಳು ಕೆಲವು ವಾರಗಳಲ್ಲಿ ಸದಸ್ಯರಿಗೆ ತಿಳಿಸಲಾಗುವುದು. ◆◆◆

## VKK members discover best way to beat the heat



**ಡಿಮ್ಯಾಂಡಪ್ಪೋ! ಡಿಮ್ಯಾಂಡು!!**

Members gathered around the majjige containers to drench their throats with masala majjige

As temperature soared to mid-nineties at VKK Annual Picnic, members started looking for cold drinks. There was this one drink that members soon found out was the best way to beat the heat. The **ice-cold majjige** was different from how it is normally done. Someone coined a new name for it - **masala majjige** - due to its ingredients and it soon found itself many happy fans. Most of the empty milk cans in the picture above contained concentrated **majjige** that was brought to the picnic. Ice and lots of water were added to the concentrate to get it to a right consistency and taste. The orange and blue containers were filled in with **majjige** multiple times.

Oh! by the way, if any of you who attended the picnic is still trying to figure out what went into this drink, look at the last page of this newsletter. Hope it will come handy next summer.

## A THANK YOU NOTE

VKK would like to thank all the members who actively participated at the Annual Picnic held on August 11, 2007.

There were many volunteers who helped the Executive Committee members through out the day in performing various activites. We would like to thank the following members in this regard. Poulomi Rao, Meera Rao, Sharmila Rao, Annapoorna Balachandra, Sujatha Datta, Anitha Murthy, Satya Sridhara, Shailaja Iyer and Gurudutt Ramamurthy, Kullegowda, Mahesh Kumar, T. A. Sridhara, Kempegowda, Prasad Nagamangala, Ramanujam Prasad, Shreenivasa Rao, Rajashankar, Hanumanth Rao, Nitin Mangalavedhe.

Our thanks are also to Vasanthi Gowda, Soumini Ramesh, Jayanthi Mittur and Jayashree Kumar for providing chicken for barbequing.

We would also like to thank all those who have directly or indirectly helped us in making this event a big success and a joyful outing for all

Due to work and family commitments, Uma Rao (*Editor*, DINDIMA) has indicated that she will be unable to actively contribute to the release of future issues of DINDIMA. We would like to thank Uma Rao for all her help in bringing out the first three issues of DINDIMA.

-President and Members, EC, VKK

## ಅಂತರ್ಜಾಲದಲ್ಲಿನ ಕನ್ನಡ ತಾಣಗಳು

ಪ್ರತಿ ಸಂಚಿಕೆಯಲ್ಲೂ ಅಂತರ್ಜಾಲದಲ್ಲಿರುವ ಕನ್ನಡ ತಾಣಗಳ (websites) ಬಗ್ಗೆ ಮಾಹಿತಿ ನೀಡುವ ಯೋಜನೆ ನಮ್ಮದು. ಓದುಗರೂ ಸಹಾ ತಮಗೆ ಇಷ್ಟವಾದ websiteಗಳ ಬಗ್ಗೆ ನಮಗೆ ತಿಳಿಸಿದಲ್ಲಿ ಅವುಗಳ ಬಗ್ಗೆ ಮುಂಬರುವ ಸಂಚಿಕೆಯಲ್ಲಿ ಪ್ರಕಟಿಸಲು ಪ್ರಯತ್ನಿಸುತ್ತೇವೆ –ಸಂಪಾದಕರು.

*This month's featured website is http://www.kannada-online.info*

*Kannada-Online.info is a website owned and managed Central Institute of Indian Languages (CIIL). It has established Kannada Online Language learning program mainly developed for those who want to learn Kannada as a second language. The course is said to cater to the need of Kannada diaspora who may have a desire to know not only the language structure but also its unique and vibrant tradition, architecture, music, dance, worshipping pattern and the constant interaction between Kannadigas and their world view. There are sampleonline lessons and exercises. Course fee and Examination fee are both $50.00*

*Disclaimer: The weblink(s) provided in this section are for informational purposes only. Vidyaranya Kannada Kuta or Dindima do not endorse any of these sites and are not responsible for any content published at these sites. Please use and rely on your judgment before visiting websites mentioned in this section.*

## ಸಂಗಮ ಮುಖಪುಟ ಚಿತ್ರಕ್ಕಾಗಿ ಆಹ್ವಾನ!

ಆತ್ಮೀಯ ಸದಸ್ಯರಿಗೆಲ್ಲರಿಗೂ ನಮಸ್ಕಾರ.

ವಿದ್ಯಾರಣ್ಯ ಕನ್ನಡ ಕೂಟ ಯುಗಾದಿ ಮತ್ತು ದೀಪಾವಳಿ ಸಂದರ್ಭದಲ್ಲಿ "ಸಂಗಮ" ಸಂಚಿಕೆಯನ್ನು ಹೊರತರುತ್ತಿರುವ ವಿಷಯ ನಿಮಗೆಲ್ಲಾ ತಿಳಿದೇ ಇದೆ. ಈ ಬಾರಿ ಸಂಗಮದ ಮುಖಪುಟವನ್ನು ಮತ್ತಷ್ಟು ವೈವಿಧ್ಯಪೂರ್ಣವಾಗಿಸಲು ಸದಸ್ಯರಿಂದ ಈ ಮೂಲಕ ಮುಖಪುಟ ಚಿತ್ರವನ್ನು ಆಹ್ವಾನಿಸಲಾಗುತ್ತಿದೆ. ಈ ಬಾರಿಯ ಸಂಚಿಕೆ ಬೆಳಕಿನ ಹಬ್ಬ ದೀಪಾವಳಿಯಂದು ಹೊರಬರುತ್ತಿರುವುದರಿಂದ, ಆ ಸಂಬಂಧದ ಚಿತ್ರಗಳಿಗೆ ಆದ್ಯತೆ ನೀಡಲಾಗುತ್ತದೆ.

**ನಿಯಮಗಳು:**

1. ನೀವು ಕಳಿಸುವ ಚಿತ್ರಗಳು/ರೇಖಾಚಿತ್ರ/ಪೇಂಟಿಂಗ್ ಫೋಟೋಷಾಪ್ ಅಥವಾ ಮೈಕ್ರೋಸಾಫ್ಟ್ ಪೈಂಟ್ ಮಾದರಿಯಲ್ಲಿರಬೇಕು. ಮುದ್ರಿತ ಚಿತ್ರಗಳು, ಸ್ಕ್ಯಾನ್ ಮಾಡಿದ ಚಿತ್ರಗಳಿಗೂ ಅವಕಾಶವಿದೆ.
2. ಅಂತರ್ಜಾಲದಿಂದ ತೆಗೆದುಕೊಂಡ ಚಿತ್ರಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ವಂತ ಚಿತ್ರಗಳಿಗೆ ಮಾತ್ರ ಪ್ರವೇಶ. ಚಿತ್ರದ ಬಗ್ಗೆ ಮಾಹಿತಿ (ಚಿತ್ರ ತೆಗೆದ ದಿನಾಂಕ/ಸ್ಥಳ ಇತರ ವಿವರಗಳಿದ್ದರೆ) ಅಗತ್ಯ.
3. ಛಾಯಾಚಿತ್ರದ ಅಳತೆ ಕನಿಷ್ಠ 8.5 x 11" OR (1024 x 768PXL) ಇರಬೇಕು.
4. ರೇಖಾಚಿತ್ರಗಳು, ಪೈಂಟಿಂಗ್ ಡಿಜಿಟಲ್ ಕಲಾಕೃತಿಗಳಾದರೆ 7 x 7" OR (300DPI) ಇರಬೇಕು.
5. ಚಿತ್ರ ಕಳಿಸುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಗಮ ಸಂಪಾದಕರನ್ನು ಸಂಪರ್ಕಿಸಿ.
6. ತೀರ್ಪುಗಾರರು ಮತ್ತು ಸಂಪಾದಕರ ಕುಟುಂಬದ ಸದಸ್ಯರಿಗೆ ಪ್ರವೇಶವಿಲ್ಲ.

ಮೂರು ಜನ ತೀರ್ಪುಗಾರರ ಸಮಿತಿ ಸಂಗಮದ ಮುಖಪುಟ ಚಿತ್ರವನ್ನು ಆಯ್ಕೆ ಮಾಡುತ್ತದೆ. ತೀರ್ಪುಗಾರರ ತೀರ್ಮಾನವೇ ಅಂತಿಮ. ನಿಮ್ಮ ಚಿತ್ರಗಳು ನಮ್ಮ ಕೈತಲುಪಲು ಕಡೆಯ ದಿನಾಂಕ ಅಕ್ಟೋಬರ್ 1.

ಇದೇ ರೀತಿ ಈ ಬಾರಿಯ ಸಂಗಮದಲ್ಲಿ ಪ್ರಕಟಿಸಲು ನಿಮ್ಮ ಕಥೆ, ಕವನ, ಲೇಖನಗಳನ್ನು ನಮಗೆ ಕಳಿಸಿಕೊಡಿ. ಬರಹಗಳು ನಮ್ಮನ್ನು ತಲುಪಲು ಕಡೆಯ ದಿನಾಂಕ ಅಕ್ಟೋಬರ್ 15.

ವಂದನೆಗಳು,

ತ್ರಿವೇಣಿ ಶ್ರೀನಿವಾಸರಾವ್
ಸಂಗಮ ಸಮಿತಿಯ ಪರವಾಗಿ (ಈಮೇಲ್: sangama@vidyaranyakannadakuta.org )

# IN A NUTSHELL

## MARK YOUR CALENDARS

The following four events are planned during September and October.

**Kannada Movie: SIRIVANTHA**
Date: September 9, 2007 @ 10:00 AM

**Open Forum**
Date: September 16, 2007 @ 3:00 PM

**Ganesha Festival Celebrations**
Date: September 22, 2007

**Dasa Day Celebrations**
Date: October 27, 2007

Movie is at Cinemark, Woodridge and other events are at HTGC, Lemont.

The details of these events will be sent to members and posted on our website. Please mark your calendars and try to attend them.

## DEEPAVALI EVENT

This year's Deepavali program has been moved to Dec 1, 2007. Our earlier reservation for Nov 10th, was cancelled by the HTGC authorities due HTGC needing the auditorium and dining hall for their own event scheduled on the same day.

## MEMBERSHIP

VKK membership now stands at 233, of which 212 are family memberships and 21 are individual memberships. This is an increase of more than 30% over previous year's.

## ONLINE REGISTRATION

The Exec. Committee has registered VKK with PayPal and Google Checkout companies to provide VKK members the convenience of sponsoring and purchasing tickets of VKK events. The response from members has been both encouraging and lukewarm. The Executive Committee hopes that more members will avail this online convenience.

## YAHOO! GROUPS

We are still experiencing issues with yahoogroups sending notifications to some email accounts belonging to certain domains. Measures are being taken to send emails notifications to these accounts separately.

# ಕಥೆ ಕಟ್ಟೋಣ ಬನ್ನಿ

## ಬಲೆ (ಧಾರಾವಾಹಿ)

**ವಿದ್ಯಾರಣ್ಣಿಗ ಶ್ರೀ ಪ್ರಕಾಶ್ ಹೇಮಾವತಿ ಡಿಂಡಿಮದ ಹಿಂದಿನ ಸಂಚಿಕೆಯಲ್ಲಿ ಪ್ರಾರಂಭಿಸಿದ 'ಬಲೆ'ಯನ್ನು ಈ ಸಂಚಿಕೆಯಲ್ಲಿ ಹಿರಿಯ ಸದಸ್ಯ ಶ್ರೀ ಜಗನ್ನಾಥ ನಾಯಕ್ ಮತ್ತು ಶ್ರೀಮತಿ ತ್ರಿವೇಣಿ ಶ್ರೀನಿವಾಸರಾವ್ ಮುಂದುವರೆಸಿಕೊಂಡು ಹೋಗಿದ್ದಾರೆ. ಭಾಗ-೧ ಓದಲು ಕೂಟದ ವೆಬ್‌ಸೈಟ್‌ಗೆ ಭೇಟಿ ನೀಡಿ.**

### ಎಲ್ಲೆಲ್ಲೂ ಕಳವಳ [ಭಾಗ-೨]

**◈ ಲೇಖಕ: ಜಗನ್ನಾಥ್ ನಾಯಕ್**

**ಇಲ್ಲಿವರೆಗೆ:**
ಅಮೆರಿಕೆಗೆ ೬೦ರ ದಶಕದಲ್ಲಿ ಬಂದು ನೆಲಸಿದ್ದ ಗೋಪಿನಾಥ ರಾಯರು ಮತ್ತು ವನಜಮ್ಮನವರ ವಿಧೇಯ ಮಗ ಅರವಿಂದ ವಿದ್ಯಾಭ್ಯಾಸ ಮುಗಿಸಿ ಕೆಲಸವನ್ನು ಪ್ರಾರಂಭಿಸಿದ್ದ. ಕಾಲೇಜ್ ಸಹಪಾಠಿಯಾಗಿದ್ದ ರಶ್ಮಿ ಗೌಡಳ ಸ್ನೇಹ ಅವನಿಗೆ ಆಪ್ಯಾಯಮಾನವಾಗಿತ್ತು. ಈರ್ವರ ತಂದೆ ತಾಯಂದಿರು ಈ ಸ್ನೇಹಕ್ಕೆ ಹೆಚ್ಚು ಗಮನ ಅಥವಾ ಮಹತ್ವವನ್ನು ನೀಡಿರಲಿಲ್ಲ. ಆದರೂ, ಅರವಿಂದನು, ರಶ್ಮಿಯನ್ನು ಮದುವೆ ಆಗುತ್ತೇನೆಂದರೆ ಏನು ಹೇಳುವುದೆಂದು ಗೋಪಿನಾಥ ರಾಯರು ಯೋಚಿಸುತ್ತಿದ್ದರು. ರಶ್ಮಿಯ ಅಣ್ಣನ ಮದುವೆಯನ್ನು ಕರ್ನಾಟಕ ಸರ್ಕಾರದ ಓರ್ವ ಮಂತ್ರಿಯ ಮಗಳೊಡನೆ ನೆಡೆದಿತ್ತು . ರಶ್ಮಿ ತನ್ನ ತಂದೆ ತನಗೆ ವರನನ್ನು ಹುಡುಕುತ್ತಿರುವುದು ತಿಳಿದಿದ್ದು ಅದರ ಬಗ್ಗೆಯೇ ಚಿಂತಾಕ್ರಾಂತಳಾಗಿದ್ದಳು.

ಅರವಿಂದನು ಶಿಕಾಗೋದಲ್ಲಿರುವ ಟ್ರೈಯಾಲಜಿ ಕಾರ್ಪೋರೇಶನ್‌ನಲ್ಲಿ ತಂತ್ರಾಂಶ ಇಂಜಿನಿಯರಿಂಗ್ ಶಾಖೆಯ ಮ್ಯಾನೇಜರ್ ಆಗಿ ಐದಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಆ ಕಂಪನಿಯವರು ತಮ್ಮ ವಾರ್ಷಿಕ ಮ್ಯಾನೇಜ್‌ಮೆಂಟ್ ಲೀಡರ್‌ಶಿಪ್ ಕಾನ್ಫರೆನ್ಸನ್ನು ಮಿಸ್ಸೊರಿ ರಾಜ್ಯದ ಬ್ರಾನ್ಸನ್ ನಗರದಲ್ಲಿ ಏರ್ಪಡಿಸಿದ್ದರು. ಮೂರು ದಿವಸದ ಕಾನ್ಫರೆನ್ಸಿಗೆ ಮ್ಯಾನೇಜರ್‌ಗಳು ಮತ್ತು ಇತರ ಅಧಿಕಾರಿಗಳು ತಮ್ಮ ಪತಿ, ಪತ್ನಿ, ಗೆಳೆಯ ಅಥವಾ ಗೆಳೆತಿಯರನ್ನು ಜೊತೆಗೆ ಕರೆದುಕೊಂಡು ಹೋಗಬಹುದಿತ್ತು. ಅರವಿಂದನು ರಶ್ಮಿಯನ್ನು ಒತ್ತಾಯಿಸಿ ತನ್ನೊಂದಿಗೆ ಕರೆದುಕೊಂಡು ಹೋದ. ಕೊನೆಯ ದಿನದ ಕಾರ್ಯಕ್ರಮದಲ್ಲಿ ಕಂಪನಿಯಲ್ಲಿ ಚೆನ್ನಾಗಿ ಕೆಲಸ ಮಾಡಿದವರನ್ನೆಲ್ಲಾ ತುಂಬಾ ಹೊಗಳಿ, ಬೋನಸ್‌ಗಳನ್ನೂ ಕೊಟ್ಟರು. ಅರವಿಂದನಿಗೆ ಒಳ್ಳೆಯ ಬೋನಸ್ ಅಲ್ಲದೆ, ವೈಸ್ ಪ್ರೆಸಿಡೆಂಟ್ ಹುದ್ದೆಗೆ ಪ್ರಮೋಶನ್ ಸಹ ಸಿಕ್ಕಿತು. ಇದೆಲ್ಲಾ ತನ್ನ ಆತ್ಮೀಯ ಗೆಳತಿ ರಶ್ಮಿಯ ಮುಂದೆ ಆಗಿದ್ದು ಅರವಿಂದನಿಗೆ ಅತೀ ಸಂತೋಷವಾಗಿ ತಾನು ಸ್ವರ್ಗದಲ್ಲೇ ಇದ್ದೇನೆ ಎನ್ನುವಂತಾಯಿತು.

ಇದಕ್ಕೆ ಎರಡು ತಿಂಗಳ ಹಿಂದೆ ಅರವಿಂದನಿಗೆ ಟೆನ್ನಿಸ್ಸಿಯಲ್ಲಿರುವ ಗ್ರಾಂಡ್ ವಿಸ್ತ ಬೇ (Grand Vista Bay) ರೆಸಾರ್ಟ್‌ನಿಂದ ಒಂದು ಪ್ರಮೋಶನಲ್ ಪೋಸ್ಟ್ ಕಾರ್ಡ್ ಬಂದಿತ್ತು. ಆ ರಿಸಾರ್ಟ್‌ನಲ್ಲಿ ಮೂರು ದಿನ ಉಳಿದು ಕೊಳ್ಳಲು ಅಮಂತ್ರಣವಿತ್ತು. ಇದಕ್ಕಿದ್ದ ಒಂದೇ ನಿಯಮವೆಂದರೆ ಆ ರೆಸಾರ್ಟ್‌ನಲ್ಲಿರುವ ಮಹಾಕೆರೆಯ ಪಕ್ಕದಲ್ಲಿರುವ ಮನೆ ಕಟ್ಟುವ ಜಾಗಗಳನ್ನೆಲ್ಲಾ ಮಾರಾಟ ಮಾಡುವ ಅಂದಾಜಿನಲ್ಲಿ ಅವರು ತೋರಿಸುವ ಒಂದು ಸೇಲ್ಸ್ ಪ್ರಸೆಂಟೇಶನ್ ಮತ್ತು ಟೂರ್‌ನಲ್ಲಿ ಭಾಗವಹಿಸಬೇಕಿತ್ತು. ಅರವಿಂದ ತನ್ನ ಕಾನ್ಫರೆನ್ಸಿನ ದಿನ ಗೊತ್ತಾದ ಮೇಲೆ ಗ್ರಾಂಡ್ ವಿಸ್ಟ ಬೇ ರೆಸಾರ್ಟ್‌ಗೂ ರಿಸರ್ವೇಶನ್ ಮಾಡಿದ್ದ. ಬ್ರಾನ್ಸನ್ ನಗರದಿಂದ ಇದು ಸುಮಾರು ನೂರು ಮೈಲಿ ದೂರವಿತ್ತಷ್ಟೆ.

ಅರವಿಂದ ಬ್ರಾನ್ಸನ್ ನಗರದ ಕಾನ್ಫರೆನ್ಸ್ ಮುಗಿದ ಮೇಲೆ ರಶ್ಮಿಯೊಂದಿಗೆ ರಾತ್ರಿ ಸುಮಾರು ಎಂಟು ಗಂಟೆಯ ಹೊತ್ತಿಗೆ ಗ್ರಾಂಡ್ ವಿಸ್ತ ಬೇ ರೆಸಾರ್ಟ್‌ಗೆ ಬಂದು ರಿಜಿಸ್ಟ್ರೇಶನ್ ಮಾಡಿಸಲಿಕ್ಕೆ ಹೋದ. ರಶ್ಮಿ ಸ್ವಲ್ಪ ದೂರದಲ್ಲೇ ನಿಂತಿದ್ದಳು. ಅವರು ಉಚಿತವಾಗಿ ಕೊಡುವ ರೂಮಿನಲ್ಲಿ ಒಂದು ಡಬಲ್ ಬೆಡ್ ಮಾತ್ರ ಇದ್ದುದರಿಂದ ಅರವಿಂದನಿಗೆ ಸಮಾಧಾನವಾಗದೆ ಬೇರೆ ಒಳ್ಳೆಯ ರೂಮಿಗೆ upgrade ಮಾಡಲು ಸಾಧ್ಯವೆ ಎಂದು ವಿಚಾರಿಸಿದ. ಅದಕ್ಕೆ ಅಲ್ಲಿನ ರೆಸರ್ವೇಶನ್ ಕ್ಲಾರ್ಕ್ ಮೇರಿ, ತಮ್ಮಲ್ಲಿ ಒಂದು ಹನಿಮೂನ್ ಸ್ವೀಟ್ ಇದೆಯೆಂದೂ ಇನ್ನೂ ಐವತ್ತು ಡಾಲರ್ ಹೆಚ್ಚಿಗೆ ಕೊಟ್ಟರೆ ಅದನ್ನು ಎರಡು ದಿವಸಕ್ಕೆ ಕೊಡುತ್ತೇವೆಂದು ಹೇಳಿದಳು. ಅರವಿಂದ ಸಂತೋಷದಿಂದ ಒಪ್ಪಿದ. ರೆಸರ್ವೇಶನ್ ಪುಸ್ತಕದಲ್ಲಿ ಅವರ ವಿವರಗಳನ್ನು ನೊಂದಾಯಿಸಲು ನೀವೆಷ್ಟು ಮಂದಿ ಇದ್ದೀರಾ ಎಂದು ಕೇಳಿದಾಗ, ಇಬ್ಬರೇ ಎಂದು ಉತ್ತರಿಸಿದ. ನೀವು ಗಂಡ ಹೆಂಡತೀನಾ ಎಂದು ಕೇಳಿದಾಗ "ಅಲ್ಲ" ಎಂದು ಹೇಳಿದರೆ ಅವರೇನಾದರೂ ಸಂಶಯ ಮತ್ತು ತಪ್ಪು ತಿಳಿಯುವರೆಂದು ಸುಮ್ಮನೆ "ಹೂ" ಎಂದು ಬಿಟ್ಟ. ನಂತರ ಅರವಿಂದ ಮತ್ತು ರಶ್ಮಿ ತಮ್ಮ ಲಗೇಜನ್ನು ತೆಗೆದುಕೊಂಡು ಆ ಸ್ವೀಟ್‌ಗೆ ಹೋಗುವಾಗ ಮೇರಿ ಕಿಟಕಿಯಿಂದ ಅವರನ್ನೇ ನೋಡುತ್ತಿದ್ದಳು. ಆ ಸ್ವೀಟ್‌ನ ಮುಂದೆ ಕಾಕತಾಳೀಯವೆಂಬಂತೆ ತುಂಬಾ ಹೂಗಳಿಂದ ಅಲಂಕರಿಸಿದ್ದ ಒಂದು ಕಾರು ನಿಂತಿದ್ದು ಅದರ ಹಿಂದುಗಡೆ "Just Married" ಎಂಬ ಫಲಕವಿತ್ತು. ಅದನ್ನು ನೋಡಿದ ಮೇರಿ ರೆಜಿಸ್ಟ್ರೇಶನ್ ಪುಸ್ತಕದಲ್ಲಿ ಇವರಿಬ್ಬರೂ ಹೊಸದಾಗಿ ಮದುವೆಯಾಗಿ ಹನಿಮೂನಿಗೆ ಬಂದಿರುವರೆಂದು ನಮೂದಿಸಿದಳು. ಆ ವಿಸ್ತಾರವಾದ ಸ್ವೀಟ್‌ನ್ನು ನೋಡಿ ರಶ್ಮಿಗೆ ತುಂಬಾ ಆನಂದವಾಯಿತು. ಅದು ತಾನು upgrade ಮಾಡಿಸಿದ ಹನಿಮೂನ್ ಸ್ವೀಟ್ ಎಂದು ಅರವಿಂದ ಆಕೆಗೆ ಹೇಳಲೇ ಇಲ್ಲ!

ಇದೆಲ್ಲಾ ಕಳೆದ ವರ್ಷದ ಸಂಗತಿ. ಆದರೆ ಈ ವರ್ಷ ಅರವಿಂದನ ಕಂಪನಿಯ ವ್ಯವಹಾರ ಅಷ್ಟೇನು ಚೆನ್ನಾಗಿರಲಿಲ್ಲ. ತಮ್ಮ ಕ್ಷೇತ್ರದಲ್ಲಿ ತುಂಬಾ ಸ್ಪರ್ಧೆಯನ್ನು ಎದುರಿಸಬೇಕಾದ್ದರಿಂದ ಕಂಪನಿಯಲ್ಲಿ ಬಹಳ ಬದಲಾವಣೆ ಮಾಡಬೇಕಾಯಿತು. ಇನ್ನು ಮುಂದೆ ಏನಾಗಬಹುದೆಂದು ಎಲ್ಲರೂ ಆತಂಕಗೊಂಡಿದ್ದರು. ಆದ್ದರಿಂದ ತಂದೆ-ತಾಯಿಯರು ಎಲ್ಲಿಯಾದರು ಮದುವೆ ವಿಷಯ ಶುರುಮಾಡಿದರೆ ಅರವಿಂದ ಏನೂ ಗಮನ ಕೊಡುತ್ತಿರಲಿಲ್ಲ.

ಈ ವರ್ಷ ಜುಲೈ ಹದಿಮೂರನೇ ತಾರೀಖು ಶುಕ್ರವಾರ ಅರವಿಂದನ ಜನ್ಮದಿನ. ಅದಕ್ಕೆ ಸೂಕ್ಷ್ಮವಾಗಿ ಅವನ ಅಪಾರ್ಟ್‌ಮೆಂಟಿನಲ್ಲೇ ಒಂದು ಸಮಾರಂಭ ಮಾಡಲು ಕಂಪನಿಯ ಇಬ್ಬರು ಸ್ನೇಹಿತರು, ರಶ್ಮಿ ಮತ್ತು ಅರವಿಂದನ ತಾಯಿ ತಂದೆ ಮಾತ್ರ ಬರುವುದಿತ್ತು. ಆ ದಿನ ಬೆಳಿಗ್ಗೆಯೇ ಅರವಿಂದನ ತಾಯಿ ತಂದೆ ಬಂದು ಅಪಾರ್ಟ್‌ಮೆಂಟ್‌ನ್ನು ಸ್ವಲ್ಪ ತಯಾರು ಮಾಡಿ, ಸ್ವಲ್ಪ ಅಡುಗೆ ಮಾಡುವುದೆಂದು ನಿರ್ಧರಿಸಿದ್ದರು.

ರಶ್ಮಿಯ ತಂದೆ ನಂಜಪ್ಪ ಗೌಡರು ಮತ್ತು ತಾಯಿ ಪುಷ್ಪ ಇರುವುದು ನ್ಯೂಯಾರ್ಕಿನಲ್ಲಿ. ನಂಜಪ್ಪ ಗೌಡರಿಗಂತೂ ರಶ್ಮಿಯ ಮದುವೆ ಬಗ್ಗೆ ತುಂಬಾ ಯೋಚನೆ ಹಿಡಿದಿತ್ತು. ಬೆಂಗಳೂರಿನ ಲಾ ಕಾಲೇಜಿನಲ್ಲಿ ಸಹಪಾಠಿಯಾಗಿದ್ದ ಮತ್ತು ಒಳ್ಳೆಯ ಮಿತ್ರನಾದ ಸೋಮೇ ಗೌಡರು ಪ್ರಸಿದ್ಧ ಇಮಿಗ್ರೇಷನ್ ವಕೀಲರಾಗಿ ಶಿಕಾಗೋ ಬಳಿಯ ಶಾಂಬರ್ಗ್‌ನಲ್ಲಿ ನೆಲೆಸಿದ್ದರು. ಅವರ ಮಗ ಪ್ರದೀಪನಿಗೆ 14ನೆ ತಾರೀಖು ಶನಿವಾರ ಶಾಂಬರ್ಗ್‌ನಲ್ಲಿ ಮದುವೆ ಆಗಲಿತ್ತು. ನಂಜಪ್ಪ ಗೌಡರಿಗೆ ಪತ್ನಿ ಮತ್ತು ಮಗಳೊಂದಿಗೆ ಮದುವೆಗೆ ಬರಲು ಒತ್ತಾಯದಿಂದ ಕರೆದಿದ್ದರು. ಬೆಂಗಳೂರಿನಲ್ಲಿ ತುಂಬಾ ಪ್ರಸಿದ್ದರಾಗಿರುವ, ಶ್ರೀಮಂತರಾಗಿರುವ ಉದ್ಯಮಿ ಲಿಂಗೇಗೌಡರ ಒಬ್ಬನೇ ಮಗ ತುಕಾರಾಮ್ ಹಲವು ವರ್ಷ ಮುಂಬೈನಲ್ಲಿ ಟಾಟಾ ಮೋಟರ್ಸ್‌ನಲ್ಲಿ ಕೆಲಸ ಮಾಡಿ, ಅಲ್ಲಿನ

ರಾಜಕೀಯ ಸರಿಯಾಗದೆ, ಆ ಕೆಲಸ ಬಿಟ್ಟು, ವಿದ್ಯಾರ್ಥಿ ವೀಸಾದ ಮೇಲೆ ಅಮೇರಿಕಾಗೆ ಬಂದು, ಶಿಕಾಗೋ ಯುನಿವರ್ಸಿಟಿಯಲ್ಲಿ ಎಮ್. ಬಿ. ಎ. ಮಾಡುತ್ತಿದ್ದನು. ಸೆಪ್ಟೆಂಬರ್ ತಿಂಗಳಿನಲ್ಲಿ ಅವನ ವಿದ್ಯಾಭ್ಯಾಸ ಮುಗಿದ ಮೇಲೆ, ವೀಸಾದ ಕಾನೂನು ಪ್ರಕಾರ ಭಾರತಕ್ಕೆ ವಾಪಸು ಹೋಗಲೇ ಬೇಕಾಗಿತ್ತು. ಅವನಿಗೆ ವಾಪಸು ಹೋಗಲು ಏನೂ ಇಷ್ಟವಿರಲಿಲ್ಲ. ಅದಕ್ಕೆ ಸೋಮೇ ಗೌಡರು ತುಕಾರಾಮ್‌ಗೆ ಹೇಳಿದರು, ನೀನು ಇಲ್ಲಿಯೇ ಹುಟ್ಟಿದ ಹುಡುಗಿಯನ್ನು ಮದುವೆ ಮಾಡಿಕೊಂಡರೆ ವಾಪಸು ಹೋಗಬೇಕಾಗಿಲ್ಲ ಎಂದು. ಅದಕ್ಕೆ ನಾನು ಸಹಾಯ ಮಾಡುತ್ತೇನೆಂದು ಭರವಸೆಯನ್ನೂ ಕೊಟ್ಟರು. ಈ ತುಕಾರಾಮನ ವಿಷಯವನ್ನು ಸೋಮೇ ಗೌಡರು ನಂಜಪ್ಪ ಗೌಡರಿಗೆ ಹೇಳಿದರು. ನೀವು ರಶ್ಮಿಯನ್ನು ಕರೆದುಕೊಂಡು ನನ್ನ ಮಗನ ಮದುವೆಗೆ ಬಂದರೆ, ನಿಮಗೆಲ್ಲಾ ತುಕಾರಾಮನ ಪರಿಚಯ ಮಾಡಿಕೊಡುತ್ತೇನೆ. ಮದುವೆ ಮರುದಿವಸ ನೀವೆಲ್ಲರೂ ನಮ್ಮ ಮನೆಗೆ ಫಲಾಹಾರಕ್ಕೆ ಬಂದರೆ, ರಶ್ಮಿಯನ್ನು ಒಪ್ಪಿಸುವುದು ನಿಮ್ಮ ಕೆಲಸ, ತುಕಾರಾಮನನ್ನು ಒಪ್ಪಿಸುವುದು ನನ್ನ ಜವಾಬ್ದಾರಿ ಎಂದು ಹೇಳಿದರು.

ಶುಕ್ರವಾರ ಬೆಳಿಗ್ಗೆ ಹತ್ತು ಗಂಟೆಗೆ ನಂಜಪ್ಪ ಗೌಡರು ರಶ್ಮಿಗೆ ಫೋನ್ ಮಾಡಿ ಹೇಳಿದರು, ಮರುದಿನ ಸೋಮೇ ಗೌಡರ ಮಗನ ಮದುವೆಗೆಂದು ಶಿಕಾಗೋಗೆ ಬರುತ್ತಾ ಇದ್ದೇವೆ. ಶುಕ್ರವಾರ ಮಧ್ಯಾಹ್ನ ನಾಲ್ಕು ಗಂಟೆಗೆ ಓಹೇರ್ ವಿಮಾನ ನಿಲ್ದಾಣಕ್ಕೆ ಬಂದು ನಮ್ಮನ್ನು ನಿನ್ನ ಅಪಾರ್ಟ್‌ಮೆಂಟಿಗೆ ಕರೆದುಕೊಂಡು ಹೋಗು ಎಂದು. ರಶ್ಮಿಗೂ ತುಂಬಾ ಸಂತೋಷವಾಯಿತು. ಅದೇ ಸಾಯಂಕಾಲವಿದ್ದ ಅರವಿಂದನ ಜನ್ಮದಿನದ ಪಾರ್ಟಿಗೆ ತಂದೆತಾಯಿಗಳನ್ನು ಕರೆದುಕೊಂಡು ಹೋದರೆ, ಅವರು ಅರವಿಂದನನ್ನು ನೋಡಿ ಖುಷಿಯಾಗಿಬಿಟ್ಟರೆ, ನಾನು ಅವನನ್ನು ಮದುವೆ ಮಾಡಿಕೊಳ್ಳುವ ವಿಷಯ ತಿಳಿಸಬಹುದಲ್ಲ ಎಂದು ಯೋಚಿಸಿದಳು.

ಶುಕ್ರವಾರ ಬೆಳಿಗ್ಗೆ ಅರವಿಂದ ಬೇಗನೆ ಆಫೀಸಿಗೆ ಹೋದ. ಆದಿನ ಕಂಪನಿಯ ಎಲ್ಲ ಮುಖ್ಯ ಅಧಿಕಾರಿಗಳ ತುರ್ತು ಮೀಟಿಂಗ್ ಇತ್ತು. ಗೋಪಿನಾಥ ರಾಯರು ಮತ್ತು ಪತ್ನಿ ವನಜಮ್ಮ ಅರವಿಂದನ ಅಪಾರ್ಟ್‌ಮೆಂಟ್ ತಯಾರು ಮಾಡಲು ಹತ್ತು ಗಂಟೆಗೆ ಬಂದರು. ಹನ್ನೆರಡು ಗಂಟೆ ಹೊತ್ತಿಗೆ ಆದಿನದ ಅಂಚೆ ಬಂದಿತು. ಗೋಪಿನಾಥ ರಾಯರು ಕೂತೂಹಲದಿಂದ ಮಗನಿಗೆ ಏನು ಅಂಚೆ ಬಂದಿದೆ ಎಂದು ನೋಡಲು ಶುರುಮಾಡಿದರು. ಅದರಲ್ಲಿ ಒಂದು ಗ್ರ್ಯಾಂಡ್ ವಿಸ್ತ ಬೇ ರೆಸಾರ್ಟ್‌ನಿಂದ ಬಂದ ಬಣ್ಣ ಬಣ್ಣದ ಲಕೋಟೆಯ ಮೇಲೆ "Mr. & Mrs. Aravinda Rao" ಎಂದು ಬರೆದಿತ್ತು. ಮತ್ತೆ ಒಂದು ಮೂಲೆಯಲ್ಲಿ "Personal Invitation for your second Honeymoom" ಎಂದು ಬರೆದಿತ್ತು. ಅದನ್ನು ನೋಡಿ ಕೂತೂಹಲ ತಡೆಯಲಾರದೆ ಗೋಪಿನಾಥ ರಾಯರು ಆ ಲಕೋಟೆಯನ್ನು ತೆರೆದು ನೋಡಿದರು. ಒಳಗಡೆ, ಎಡಗಡೆಯಲ್ಲಿ ಒಂದು ಸ್ವೀಟಿನ ಫೋಟೋ ಮೇಲೆ "Before - Where you had your first Honeymoon" ಎಂದು ಬರೆದಿದ್ದಿತು. ಅದರ ಬಲಗಡೆ ಒಂದು ಬಹಳ ಒಳ್ಳೆಯ ಸ್ವೀಟಿನ ಫೋಟೋದ ಮೇಲೆ "After complete renovations.....waiting for your second Honeymoon" ಎಂದು ಬರೆದಿತ್ತು. ಗೋಪಿನಾಥ ರಾಯರು ವನಜಮ್ಮನನ್ನು ಕರೆದು "ಏನೇ ನಮ್ಮ ಮಗನ ಮದುವೆ ಆಗಿದೆಯಲ್ಲ" ಎಂದು ಹೇಳಿದಾಗ ಅವರು ಅದನ್ನು ನಂಬಿ ತುಂಬಾ ಕಳವಳಪಟ್ಟರು. ವನಜಮ್ಮ ಹೇಳಿದರು "ನೀವ್ಯಾಕೆ ಅವನ ಅಂಚೆ ತೆಗೆದು ನೋಡಿದ್ರಿ? ಚಿಕ್ಕಂದಿನಲ್ಲಿ ಕೂಡಾ ಅವನ ಅಂಚೆ ಅಕಸ್ಮಾತಾಗಿ ತೆಗೆದರೆ ಅವನು ತುಂಬಾ ಕೋಪ ಮಾಡುತ್ತಾ ಇದ್ದ. ಈಗ ನೀವು ಅವನಿಗೆ ಏನು ಹೇಳ್ತೀರಾ ಹೇಳಿ" ಎಂದರು. ನಾನು ರಶ್ಮಿಗೆ ಫೋನ್ ಮಾಡಿ ಅವಳಿಗೇನಾದರೂ ಅವನ ಮದುವೆ ವಿಷಯ ಗೊತ್ತಿದೆಯಾ ಎಂದು ಕೇಳುತ್ತೇನೆ ಎಂದರು. ಮನಜಮ್ಮ ರಶ್ಮಿಗೆ ಫೋನು ಮಾಡುವಾಗ, ಗೋಪಿನಾಥರಾಯರು ತಮಗೆ ಮಗ ಏನು ಹೇಳುತ್ತಾನೋ ಎಂದು ಭಯಪಟ್ಟು, ಕೂಡಲೇ ಆ ಲಕೋಟೆಯನ್ನು ಸ್ಟೌವಿನ ಬೆಂಕಿಯಲ್ಲಿ ಸುಟ್ಟುಬಿಟ್ಟರು. ವನಜಮ್ಮ ರಶ್ಮಿ ಹತ್ತಿರ ನಿನಗೆ ಅರವಿಂದ ಮದುವೆ ಆಗಿರುವುದು ಗೊತ್ತಿದೆಯೇ ಎಂದು ಕೇಳಿದಾಗ, ಆಕೆ "ನಿಮಗೆ ಹೇಗೆ ಗೊತ್ತಾಯಿತು" ಎಂದು ಇವರನ್ನೇ ಕೇಳಿದಳು. ನಮಗೆ ಇಲ್ಲಿ ಒಂದು ಕಾಗದದ ಸಾಕ್ಷಿ ಇದೆ ಎಂದು ವನಜಮ್ಮ ಹೇಳಿದರು. ರಶ್ಮಿಗಂತೂ ತುಂಬಾ ಕೋಪ ಬಂದಿತು. ನನ್ನನ್ನು ಚೆನ್ನಾಗಿ ಉಪಯೋಗಿಸಿಕೊಂಡು, ಗುಟ್ಟಿನಲ್ಲಿ ಬೇರೆ ಯಾರನ್ನೋ ಮದುವೆ ಮಾಡಿಕೊಂಡು ಮೋಸ ಮಾಡಿದನಲ್ಲಾ. ತುರ್ತು ಮೀಟಿಂಗಿನಲ್ಲಿ ಇದ್ದುದರಿಂದ ಅವನು ಐದು ಗಂಟೆಗೆ ಅಪಾರ್ಟ್‌ಮೆಂಟಿಗೆ ಬರುವ ತನಕ ಅವನನ್ನು ಭೇಟಿಯಾಗುವ ಅವಕಾಶವಿರಲಿಲ್ಲ. ಐದು ಗಂಟೆ ಹೊತ್ತಿಗೆ ಅವನನ್ನು ಭೇಟಿ ಮಾಡಿ ಛೀಮಾರಿ ಹಾಕುವ ನಿಶ್ಚಯ ಮಾಡಿದಳು.

ಅರವಿಂದನಿಗೆ ಕಂಪನಿಯ ತುರ್ತಿನ ಮೀಟಿಂಗ್ ತುಂಬಾ ಕಳವಳದ ವಿಷಯವಾಗಿತ್ತು. ಸೋಮವಾರದಿಂದ ತುಂಬಾ ಜನರಿಗೆ ಕೆಲಸವಿರುವುದಿಲ್ಲ. ಈಗ ಇರುವ ಮೂವರು ವೈಸ್ ಪ್ರೆಸಿಡೆಂಟರಲ್ಲಿ ಇಬ್ಬರಿಗೆ ಮಾತ್ರ ಕೆಲಸ ಇರುತ್ತದೆ. ತುಂಬಾ ವರ್ಷದಿಂದ ಇದ್ದು ಮತ್ತು ಈಗಿನ ಪ್ರೆಸಿಡೆಂಟರಿಗೆ ಗೆಳೆಯನಾದ ರಾಬರ್ಟ್‌ನ್ನು ಶಿಕಾಗೋದಲ್ಲೇ ಇರಿಸಬಹುದು. ಅರವಿಂದ ಮತ್ತು ಮತ್ತೊಬ್ಬ ವೈಸ್ ಪ್ರೆಸಿಡೆಂಟರಲ್ಲಿ ಒಬ್ಬನಿಗೆ ಕೆಲಸವಿರುವುದಿಲ್ಲ. ಉಳಿದವನಿಗೆ ಹೊಸದಾಗಿ ಶುರುಮಾಡುವ ಚೈನಾದ ಪೀಕಿಂಗ್ ಆಫೀಸಿಗೆ ಕಳುಹಿಸುತ್ತಾರೆ ಎನ್ನುವ ಸುದ್ದಿ. ಇದೆಲ್ಲಾ ನಿಶ್ಚಯವಾಗಿ ಸೋಮವಾರ ಗೊತ್ತಾಗುತ್ತದೆ ಎಂದು ತಿಳಿಯಿತು. ಸೋಮವಾರ ಬಂದಾಗ, ಅರವಿಂದನಿಗೆ ಕೆಲಸ ಇರುತ್ತದೋ ಇಲ್ಲವೋ. ಇದ್ದರೂ ಕೂಡ ಚೈನಾಕ್ಕೆ ಹೋಗಬೇಕೋ ಏನೋ ಎಂದು ತುಂಬಾ ಕಳವಳದ ಸ್ಥಿತಿಯಲ್ಲಿ ಇದ್ದ.

ತನ್ನ ತಂದೆತಾಯಿಯರನ್ನು ಓಹೇರ್ ವಿಮಾನ ನಿಲ್ದಾಣದಿಂದ ಕರೆದುಕೊಂಡು ಐದು ಗಂಟೆಯ ಹೊತ್ತಿಗೆ ಅರವಿಂದನ ಅಪಾರ್ಟ್‌ಮೆಂಟಿನ ಮುಂದೆ ಕಾರನ್ನು ನಿಲ್ಲಿಸಿ ಅವನಿಗಾಗಿ ರಶ್ಮಿ ಕಾಯುತ್ತಿದ್ದಳು. ನಂಜಪ್ಪ ಗೌಡರು ಮತ್ತು ಪುಷ್ಪನವರಿಗೆ ಅರವಿಂದನ ವಿಷಯ ಗೊತ್ತಿರಲಿಲ್ಲ. ಇದುವರೆವಿಗೂ ಅವನನ್ನು ನೋಡಿಯೇ ಇರಲಿಲ್ಲ. ಅರವಿಂದ ಬಂದವನು ಅಪಾರ್ಟ್‌ಮೆಂಟಿನ ಒಳಗೆ ಹೋಗುವಾಗಲೇ, ರಶ್ಮಿ ತಾಯಿ ತಂದೆಯವರಿಗೆ ಇಲ್ಲೇ ಕಾರಿನಲ್ಲೇ ಇರಿ ಎಂದು ಹೇಳಿ, ಓಡಿ ಹೋಗಿ ಅರವಿಂದನ ಕೈಯಲ್ಲಿ ಅವನು ಮುಂಚೆ ಕೊಟ್ಟಿದ್ದ Friendship Ringನ್ನು ವಾಪಸ್ ಕೊಟ್ಟು ಜೋರಿನಲ್ಲಿ ನಿನ್ನ ಮದುವೆ ವಿಷಯ ಈಗಲೇ ಮಾತಾಡಬೇಕು ಎಂದು ಹೇಳಿದಳು. ಕೆಲಸದ ವಿಷಯದಲ್ಲಿ ತಲೆ ಬಿಸಿಯಾಗಿದ್ದ ಅರವಿಂದ "ಅದೆಲ್ಲಾ ಮಾತಾಡಲಿಕ್ಕೆ ಈ ಸಮಯ ಸರಿಯಿಲ್ಲ" ಎಂದು ನೆಟ್ಟಗೆ ಒಳಗೆ ಹೋದ. ರಶ್ಮಿಯೂ ಅವನ ಹಿಂದೆಯೇ ಒಳಗೆ ಹೋದಳು.

ಅರವಿಂದನಿಗೆ ಚಿಕ್ಕಂದಿನಿಂದಲೂ ಒಂದು ಅಭ್ಯಾಸ. ಶಾಲೆಯಲ್ಲಿ ಮತ್ತು ಆಫೀಸಿನಲ್ಲಿ ಬಚ್ಚಲು ಮನೆಗೆ ಹೋಗಿ ಅಲ್ಲಿನ ಕೆಲಸ ಮುಗಿದ ಮೇಲೆ ಬರೇ ಪೇಪರ್‌ನಿಂದ ಡ್ರೈಕ್ಲೀನ್ ಮಾಡುವುದು ಅವನಿಗೆ ಅಸಹ್ಯ. ಅದಕ್ಕೆ ಮನೆಗೆ ಬಂದ ಕೂಡಲೇ, ಅವತ್ತಿನ ಅಂಚೆ ತೆಗೆದುಕೊಂಡು, ಒಂದು ತಂಬಿಗೆ ನೀರು ಪಕ್ಕದಲ್ಲಿ ಇಟ್ಟುಕೊಂಡು, ಹತ್ತು ನಿಮಿಷ ಸಿಂಹಾಸನದ ಮೇಲೆ ಕೂತು, ಇರೋ ಎಲ್ಲಾ ನೋವುಗಳ ಪರಿಹಾರ ಮಾಡುವುದೇ ನಿತ್ಯ ಪದ್ಧತಿ. ಅವನು ಹತ್ತು ನಿಮಿಷ ಕರ್ತವ್ಯ ಮುಗಿಸುವ ಸಮಯದಲ್ಲಿ, ನಂಜಪ್ಪ ಗೌಡರು ಮತ್ತು ಪುಷ್ಪ ತಮ್ಮ ಮಗಳಿಗೆ ಏನಾಯಿತು, ಯಾವುದೋ ಮನುಷ್ಯನ ಮೇಲೆ ಕೋಪದಲ್ಲಿ ಮಾತಾಡಿ ಒಳಗೆ ಹೋದವಳು ಪತ್ತೇನೇ ಇಲ್ಲ ಎಂದುಕೊಂಡು ಬಂದು ಬಾಗಿಲು ತಟ್ಟಲು ಶುರುಮಾಡಿದರು. ಅಡಿಗೆ ಮನೆಯಲ್ಲಿ ರಶ್ಮಿಯೊಂದಿಗೆ ಕೂತುಕೊಂಡು ವನಜಮ್ಮ "ದೇವರೆ, ನಮಗೆ ಇರೋದೇ ಒಬ್ಬ ಮಗ, ಇದೆಲ್ಲಾ ಹೇಗೆ ಆಯಿತು. ನಾವೇನು ಪೂರ್ವಜನ್ಮದಲ್ಲಿ ಯಾವ ಪಾಪ ಮಾಡಿದ್ದೆವೋ ಏನೋ" ಎಂದು ಜೋರಾಗಿ ಅಳುವುದು ಎಲ್ಲರಿಗೂ ಕೇಳಿಸುತ್ತಿತ್ತು. ಅರವಿಂದ ಬಾಗಿಲು ತೆಗೆದು ನಂಜಪ್ಪ ಗೌಡ ಮತ್ತು ಪುಷ್ಪನವರನ್ನು ನೋಡಿ "ನೀವ್ಯಾರು?" ಎಂದು ಕೇಳುತ್ತಿದ್ದ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಗೋಪಿನಾಥ ರಾಯರು "ಏನೋ ಅರವಿಂದ, ಇದೆಲ್ಲಾ ಏನ್ಕಥೆ ನಿಂದು?" ಎಂದು ಕೇಳುತ್ತಿದ್ದರು

◆◆◆

(ಭಾಗ–೩ ಮುಂದಿನ ಪುಟದಲ್ಲಿ)

# ಮನಸಿದು ಗೊಂದಲದ ಗೂಡು (ಭಾಗ-೩)

◈ ಲೇಖಕಿ: ತ್ರಿವೇಣಿ ಶ್ರೀನಿವಾಸರಾವ್

ವಾತಾವರಣದಲ್ಲಿದ್ದ ಬಿಗಿ ಸಡಿಲಗೊಂಡು ಎಲ್ಲರ ಮುಖದಲ್ಲೂ ನಸುನಗೆ ನೆಲೆಸಿತ್ತು. ಅರವಿಂದ ಒಮ್ಮೆ ಎಲ್ಲರ ಕಡೆಗೆ ನೋಡಿ ನಗುತ್ತಾ, ನಾಟಕೀಯವಾಗಿ ಕೇಳಿದ – "ನಾನು ನೀಡಿದ ವಿವರಣೆಯಿಂದ ನಿಮಗೆಲ್ಲರಿಗೂ ಸಮಾಧಾನವಾಗಿದೆ ಎಂದು ಭಾವಿಸುತ್ತೇನೆ. ಈಗಲಾದರೂ ನಾನು ನನ್ನ ಜನ್ಮದಿನದ ಕೇಕ್ ಕತ್ತರಿಸಬಹುದೇ?" ಅರವಿಂದನ ಕೀಟಲೆ ಮಾತಿಗೆ ಮತ್ತೊಮ್ಮೆ ನಗುವಿನ ಅಲೆ ಎದ್ದಿತು. "ನಾನು ನಡೆದಿರುವುದೇನು ಎಂದು ಸರಿಯಾಗಿ ತಿಳಿದುಕೊಳ್ಳದೆ ಎಲ್ಲರನ್ನು ಗೊಂದಲದಲ್ಲಿ ಕೆಡವಿಬಿಟ್ಟೆ. ದಯವಿಟ್ಟು ನನ್ನನ್ನು ಕ್ಷಮಿಸಿ." ಎಂದು ಅರವಿಂದನ ತಂದೆ ಗೋಪಿನಾಥರಾಯರು ನಾಚಿಕೆಯಿಂದ ತಲೆ ತಗ್ಗಿಸಿದರು. ಅರವಿಂದ ನಡೆದ ವಿಷಯವನ್ನು ಎಲ್ಲರ ಮುಂದೆ ತೆರೆದಿಟ್ಟಿದ್ದ. ಗೋಪಿನಾಥರಾಯರು ಮತ್ತು ವನಜಮ್ಮನ ಮನಸ್ಸನ್ನು ಕೊರೆಯುತ್ತಿದ್ದ ಸಂಶಯದ ಕೀಟ ಶಾಂತವಾಗಿತ್ತು. ಅರವಿಂದ ಬೇರಾವುದೋ ಹುಡುಗಿಯನ್ನು ಮದುವೆಯಾಗಿದ್ದಾನೆಂದು ಕೋಪಗೊಂಡಿದ್ದ ರಶ್ಮಿಗೂ ಸಮಾಧಾನವಾಗಿತ್ತು.

ಹುಟ್ಟು ಹಬ್ಬದ ಸಡಗರ ಗರಿ ಬಿಚ್ಚಿಕೊಂಡಿತು. ಗೋಪಿನಾಥರಾಯರು ಅರವಿಂದನಿಗೆ ಬಹಳ ಪ್ರಿಯವಾದ ದೊಡ್ಡ ಚಾಕೊಲೇಟ್ ಕೇಕ್ ಮಾಡಿಸಿ ತಂದಿದ್ದರು. ಅರವಿಂದನ ಜನ್ಮದಿನಕ್ಕೆ ಎಲ್ಲರೂ ತುಂಬು ಮನಸ್ಸಿನಿಂದ ಶುಭ ಹಾರೈಸಿದರು.

ರಶ್ಮಿ ಬಣ್ಣಬಣ್ಣದ ಕಾಗದದಲ್ಲಿ ಸುತ್ತಿದ ದೊಡ್ಡ ರಟ್ಟಿನ ಪೆಟ್ಟಿಗೆಯೊಂದನ್ನು ಅರವಿಂದನಿಗೆ ನೀಡಿ, ಅದನ್ನು ಈಗಲೇ ತೆರೆದು ನೋಡಬೇಕೆಂದು ಒತ್ತಾಯಿಸಿದಳು. ರಶ್ಮಿ ನೀಡಿರುವ ಉಡುಗೊರೆಯೇನಿರಬಹುದೆಂಬ ಕುತೂಹಲ ಅರವಿಂದನಿಗೂ ಇತ್ತು. ಉಡುಗೊರೆಗೆ ಹೊದಿಸಿದ್ದ ಪೇಪರನ್ನು ನಾಜೂಕಿನಿಂದ ಬಿಡಿಸಿದ. ರಶ್ಮಿ ಅರವಿಂದನಲ್ಲಿ ಬಹುವಾಗಿ ಮೆಚ್ಚಿಕೊಳ್ಳುವ ಗುಣವೇ ಅದು. ಒರಟುತನವೆಂಬುದು ಅವನಿಂದ ಬಹು ದೂರ. ಅವನ ಮಾತು, ನಡವಳಿಕೆಗಳಲ್ಲಿ ನಯ-ವಿನಯ, ಸಹನೆ-ಸಂಯಮಗಳು ತುಂಬಿತುಳುಕುತ್ತಿದ್ದವು. ಅದು ಶ್ರೀಗಂಧದಲ್ಲಿ ಕೊರೆದಿದ್ದ ರಾಧಾ-ಕೃಷ್ಣರ ಬೆಲೆಬಾಳುವ ಕಲಾಕೃತಿ. ರಶ್ಮಿ ಅರವಿಂದನಿಗೆ ಕೊಡಲೆಂದು ಗೆಳತಿಯೊಬ್ಬಳಿಂದ ಭಾರತದಿಂದ ತರಿಸಿಕೊಂಡಿದ್ದಳು. ಆಲಿಂಗನದಲ್ಲಿ ಮೈಮರೆತಿದ್ದ ರಾಧಾ-ಕೃಷ್ಣರ ಸುಂದರ ವಿಗ್ರಹ! ಅರವಿಂದ ತನಗೆ ದೊರೆತ ಉಡುಗೊರೆಯನ್ನು ಬಹಳ ಇಷ್ಟಪಟ್ಟ. ರಶ್ಮಿಯ ಅಭಿರುಚಿಗೆ ಮೆಚ್ಚುಗೆ ಸೂಚಿಸುವಂತೆ ಅವಳ ಕಡೆಗೊಮ್ಮೆ ನೋಡಿದ. ರಶ್ಮಿಯ ನೋಟದಲ್ಲಿ ಸುರಿಯುತ್ತಿದ್ದ ಅನುರಾಗದ ಹೂಮಳೆ ಅರವಿಂದನ ಗಮನಕ್ಕೂ ಬಂದಿತು. ಅವಳ ಕಣ್ಣುಗಳಲ್ಲಿ ಕನಸುಗಳ ಕಾಮನಬಿಲ್ಲು! ಅರವಿಂದನಿಗೆ ರಶ್ಮಿಯನ್ನು ಕೀಟಲೆ ಮಾಡಬೇಕೆನಿಸಿತು.

ರಶ್ಮಿಯ ಸನಿಹ ಹೋಗಿ ಅವಳ ಕಿವಿಯಲ್ಲಿ ಪಿಸುಗುಟ್ಟಿದ, " Hey girl, stop dreaming! You might end up getting crushed and not get what you truly desire."

ಅರವಿಂದ ತನ್ನ ಸಹಜ ಸ್ವಭಾವವಾದ ತುಂಟತನದಿಂದ ಆ ಮಾತು ಆಡಿದ್ದರೂ ರಶ್ಮಿಯ ಮನಸ್ಸು ನೋವಿನಿಂದ ಮುದುಡಿಕೊಂಡಿತು. ಅರವಿಂದನ ಮಾತಿನ ಅರ್ಥವೇನು? ಅವನು ತನ್ನ ಭಾವನೆಗಳೊಡನೆ ಚೆಲ್ಲಾಟವಾಡುತ್ತಿದ್ದಾನೆಯೇ? ಅವನಿಗೆ ತನ್ನೊಡನೆ ಬದುಕು ಹಂಚಿಕೊಳ್ಳುವ ಮನಸ್ಸಿಲ್ಲವೇ? ರಶ್ಮಿ ಗೊಂದಲದಲ್ಲಿ ಸಿಕ್ಕಿಬಿದ್ದಳು.

ಸಾವರಿಸಿಕೊಂಡು, ಇಲ್ಲದ ನಗುವನ್ನು ತುಟಿಯ ಮೇಲೆ ತಂದುಕೊಂಡು – "ಹೋಗೋ ತರಲೆ. ನನಗೆ ಉಪದೇಶ ಮಾಡಕ್ಕೆ ಬರ್ತೀಯಾ? ಮಹಾತ್ಮ ಗಾಂಧಿ ಅಂದುಕೊಂಡು ಬಿಟ್ಟಿದೀಯಾ ನಿನ್ನ?" ಎಂದು ಅರವಿಂದನ ಬೆನ್ನಿಗೆ ಬಲವಾಗಿ ಗುದ್ದಿದಳು. ಅರವಿಂದ ಅವಳು ಕೊಟ್ಟ ನೋವನ್ನು ನಗುನಗುತ್ತಲೇ ಸ್ವೀಕರಿಸಿದ.

ಪ್ರತಿಯೊಬ್ಬರೂ ಹುಟ್ಟುಹಬ್ಬದ ಸಂತೋಷ ಕೂಟದಲ್ಲಿ ನಲಿದಾಡುತ್ತಿದ್ದರೂ ರಶ್ಮಿಯ ತಂದೆ ನಂಜಪ್ಪಗೌಡರಿಗೆ ಮಾತ್ರ ಇಲ್ಲಿ ನಡೆದ ಘಟನೆಗಳು ಅಷ್ಟೇನೂ ಹರುಷ ತಂದಿರಲಿಲ್ಲ. ಅರವಿಂದ ಅವರಿಗೆ ಇಷ್ಟವಾದರೂ ಅವನು ತಮ್ಮ ಅಳಿಯನಾಗುವ ಭಾವನೆ ಯಾಕೋ ಹಿತವೆನ್ನಿಸಲಿಲ್ಲ. ಅವರಿಗೆ ಅಂತರ್ಜಾತೀಯ ವಿವಾಹಗಳಲ್ಲಿ ಅಷ್ಟಾಗಿ ವಿಶ್ವಾಸ ಇರಲಿಲ್ಲ. ಅದಲ್ಲದೆ ಅರವಿಂದ ತಮ್ಮ ಅಂತಸ್ತಿಗೆ ತಕ್ಕವನಲ್ಲವೆಂಬ ಭಾವನೆಯೂ ಅವರಲ್ಲಿತ್ತು.

ರಶ್ಮಿಯ ಮದುವೆಯನ್ನು ಶ್ರೀಮಂತ ಉದ್ಯಮಿಯ ಮಗನಾದ ತುಕಾರಾಮನೊಡನೆ ಮಾಡುವುದೇ ಸರಿ ಎಂಬ ನಿರ್ಧಾರ ಅವರದಾಗಿತ್ತು. ತುಕಾರಾಮನನ್ನು ಇನ್ನೂ ಭೇಟಿಯಾಗಿರದಿದ್ದರೂ ಗೆಳೆಯರಾದ ಸೋಮೇಗೌಡರ ಮಾತಿನಿಂದಾಗಿ ಅವರಲ್ಲಿ ತುಕಾರಾಮನೇ ರಶ್ಮಿಗೆ ಯೋಗ್ಯ ವರನೆನ್ನುವ ಅನಿಸಿಕೆ ಬಂದುಬಿಟ್ಟಿತ್ತು. ಆದಷ್ಟು ಬೇಗ ರಶ್ಮಿಯ ಒಪ್ಪಿಗೆ ಪಡೆದು ಅವರಿಬ್ಬರ ಮದುವೆ ಮಾಡಿ ಮುಗಿಸಬೇಕೆಂಬ ಆತುರ ಅವರದಾಗಿತ್ತು. ಆದರೆ ರಶ್ಮಿ ಮತ್ತು ಅರವಿಂದರ ನಡುವೆ ಇದ್ದ ಅತಿಯಾದ ಸಲುಗೆ ಅವರಲ್ಲಿ ತಳಮಳ ಉಂಟುಮಾಡಿತು. ಅರವಿಂದ ಮತ್ತು ರಶ್ಮಿಯ ನಡುವೆ ಬರೀ ಸ್ನೇಹವಿದ್ದರೂ ಇರಬಹುದು ಎಂದು ತಮ್ಮನ್ನು ತಾವು ಸಮಾಧಾನಿಸಿಕೊಂಡರು.

◈◈◈

ಮರುದಿನ ರಶ್ಮಿ ತುಕಾರಾಮನನ್ನು ಭೇಟಿ ಮಾಡಿದಳು. ಅವಳಿಗೆ ತುಕಾರಾಮನ ಸ್ವಭಾವ ಸ್ವಲ್ಪವೂ ಹಿಡಿಸಿರಲಿಲ್ಲ. ಶ್ರೀಮಂತ ತಂದೆತಾಯಿಗಳ ಅತಿ ಮುದ್ದಿನಿಂದಾಗಿ ತುಕಾರಾಮ ಅಹಂಕಾರಿಯಾಗಿದ್ದ. ದರ್ಪ, ಹಟಮಾರಿತನಗಳು ಅವನ ವ್ಯಕ್ತಿತ್ವದಲ್ಲಿ ಅವನಿಗೇ ಅರಿವಿಲ್ಲದಂತೆ ಬೇರುಬಿಟ್ಟಿದ್ದವು. ಅರವಿಂದನ ಸರಳ, ಸ್ನೇಹಮಯ ವ್ಯಕ್ತಿತ್ವವನ್ನು ಮೆಚ್ಚಿದ್ದ ರಶ್ಮಿಗೆ ತುಕಾರಾಮ ಇಷ್ಟವಾಗಿರಲಿಲ್ಲ.

ಆದರೆ ತಂದೆಗೆ ಈ ವಿಷಯವನ್ನು ನೇರವಾಗಿ ಹೇಳುವುದು ಹೇಗೆ? ತಂದೆಯ ಮನಸ್ಸಿನಲ್ಲಿರುವ ಆಸೆಯೇನೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು. ರಶ್ಮಿಗೆ ಮೊದಲಿನಿಂದಲೂ ತಂದೆಗಿಂತ ತಾಯಿ ಪುಷ್ಪಾರಲ್ಲಿ ಸಲಿಗೆ ಹೆಚ್ಚು. ತಂದೆಗೆ ತಿಳಿಸುವ ಮುನ್ನ ತಾಯಿಯಲ್ಲಿ ತನ್ನ ಮನಸ್ಸಿನ ಆಸೆಯನ್ನು ಹೇಳಿಕೊಳ್ಳುವುದೇ ಸರಿ ಅನಿಸಿತು.

"ಅಮ್ಮಾ...." ಎಂದು ಕರೆಯುತ್ತಾ ತಾಯಿಯ ಕೋಣೆಯತ್ತ ನಡೆದಳು. ಯಾವುದೋ ಯೋಚನೆಯಲ್ಲಿ ಮುಳುಗಿದ್ದ ಪುಷ್ಪಾರಿಗೆ ಮಗಳ ಕರೆ ಕೇಳಿಸಿರಲಿಲ್ಲ. ರಶ್ಮಿ ತಾಯಿಯ ಎದುರಿಗೆ ನಿಂತು "ಅಮ್ಮಾ, ಏನು ಮಾಡುತ್ತಿದ್ದೀಯಮ್ಮಾ?" ಎಂದಾಗ, ಅವಸರದಿಂದ ಕಣ್ಣೊರೆಸಿಕೊಂಡು ಮುಖದಲ್ಲಿ ನಗು ಹರಡಿಕೊಂಡರು.

ರಶ್ಮಿಗೆ ಇಂದೇಕೋ ತಾಯಿ ಎಂದಿನಂತಿಲ್ಲವೆನಿಸಿತು. ಅಮ್ಮನ ಮುಖವೇಕೆ ನೋವಿನಿಂದ ಬಾಡಿದೆ? ಅರೆ, ಅಮ್ಮನ ಕಣ್ಣಂಚಿನಲ್ಲಿ ನೀರಿದೆ! "ಅಮ್ಮಾ, ಏನಾಯಿತಮ್ಮಾ? ಇಲ್ಲಿ ಒಬ್ಬಳೇ ಕುಳಿತು ಅಳುತ್ತಿರುವುದು ಯಾಕೆ? ಏನಾಯಿತು?" ರಶ್ಮಿ ತಾನೂ ಅಳುತ್ತಾ ತಾಯಿಯನ್ನು ಮಮತೆಯಿಂದ ತಬ್ಬಿಕೊಂಡಳು.

"ಅಮ್ಮಾ, ಯಾರಿಗೂ ತಿಳಿಸದೆ ಒಬ್ಬಳೇ ಅನುಭವಿಸುತ್ತಿರುವ ನಿನ್ನ ನೋವೇನಮ್ಮಾ? ಪ್ಲೀಸ್ ಹೇಳಮ್ಮಾ..." ಕಾರಣ ಹೇಳುವಂತೆ ಒತ್ತಾಯಿಸಿದಳು.

(ಏನಿರಬಹುದು ಆ ತಾಯಿಯ ಅಳಲು? –
ಮುಂದಿನ ಕಥೆಗಾರರೇ, ಊಹಿಸಬಲ್ಲಿರಾ?)

◈◈◈

# Kannada Kuta & Charity

It gives me immense pleasure in sharing a feedback from one of the charity recipients of 2006, Divya Deepa, Mysore. Divya Deepa, a place for an" Alternative school for underprivileged children" utilized the money to construct a play area. I would like to thank Kannada kuta members and other patrons who support charitable movement. Thanks to Sri S.N. Suryanarayan Rao from Mysore for guiding us to support this organization and special thanks and appreciation to KKCF 2006 committee.

Lakshman Mittur
(Chairperson, KKCF - 2006)

August 25, 2007

To

Sri Dattamurthy Ajjampur & Sri Lakshmana Mittur,

We sincerely express our gratitude to Kannada Charitable Fund Committee and Vidyaranya Kannada Kuta, Chicago, Illinois, USA for helping our organization. The amount of $ 1600.00 (One thousand and six hundred dollars only) was utilised to construct a play area consisting of following:

i) A beautiful slide
ii) Two swings
iii) A Parallel bar
iv) A platform for clay modelling
v) A sand heap
vi) Cuddapah slab Benches for sitting

This noble gesture of yours goes a long way in making our children happy. From our experience we have discovered that learning ability of a child is directly proportional to its emotional health.. All our children are very happy and eager to learn. The play area was inaugurated by Sri S.N. Suryanarayan Rao on 22nd August 2007, Wednesday. Rotarian Sri Sridhar Raje Urs presided over the function. Our children recited Bhagavadgeetha Slokas, enacted a skit, performed a folk dance etc. I have attached a few photographs.

In our free alternative school 'Kaliyuva Mane' at present 37 children are studying, 15 as inmates and rest as day scholars. (previous year:23 children) Some are school dropouts, some are parentless, some are from broken families. All children belong to socially and economically challenged segment of the society. All children belong to different age groups and have different learning potentials.

At present classes are being held at the existing dormitory, verandah and tree shades. At least 3 classrooms are needed. We request you to support our organisation in future years also. From our side we rededicate ourselves for this noble cause.

Yours truly,

M.R. Ananth Kumar
Divya Deepa Trust, Mysore

*(This letter was emailed to VKK)*

**SMILES** is the longest word



in English because there is



a MILE between the



first and last letters.



To us, the 'smiles' you've brought on these kids' faces seem even longer!

## VKK MOVIE

### SIRIVANTHA




**Directed** by S. Narayan
**Produced** by Rockline Venkatesh
**Starring** Dr. Vishnuvardhan, Shruthi, Doddanna, Srinath, K.S.Aswath, Avinash,
**On Sunday, September 9, 2007 @ 10:00 am**
**Theater Cinemark @ Seven Bridges**
**Ticket: $8.00**/person (Kids 12 & under - free)
**Tickets are available online at VKK website**

**REVIEWS**

- Sirivantha will be remembered for a long time for the **mesmerizing performance by Vishnuvardhan**. - *rediff.com*
- "Sirivantha" is one **unforgettable film** which is a must see for all the Kannada film goers who is longing for a high quality film – *RGV (nowrunning.com)*
- **Vishnuvardhan** has **created new bench mark in acting** performance through his mesmerizing performance - *oneindia.in*

**REPORTS**

- 'Rockline' Venkatesh says he has never seen anything like this before. Members of the board of censors got "**very emotional**" after viewing his film *(nowrunning.com-Sep '06)*
- 'Sirivantha', released on the eve of Dussehra, climbed to the **top of this list** on the eve of Diwali*(nowrunning.com-Oct 06)*
- "Sirivantha", which has **completed 50 days** in many centres, currently **leads the race among Kannada films**. *(indiainfo.com – Nov '06)*

## ನಿಮಗಿದು ಗೊತ್ತೇ?

ವಿದ್ಯಾರಣ್ಯ ಕನ್ನಡ ಕೂಟದ ಯುವ ಸಮಿತಿ ಇತ್ತೀಚೆಗೆ 'ಯೂತ್ ನೈಟ್' ಕಾರ್ಯಕ್ರಮವನ್ನು ಬಹು ಯಶಸ್ವಿಯಾಗಿ ಆಚರಿಸಿತು. ಈ ಕಾರ್ಯಕ್ರಮಕ್ಕೆ ಅವರ ಇತ್ತ ಹೆಸರು (theme) 'ದಿಸ್ ಇಸ್ ವೈ ಐ ಆಮ್ ಬ್ರೌನ್' ಕೆಲವರ ಹುಬ್ಬೇರಿಸಿತು. ಈ ಹಿಂದೆ ನಡೆದ ಮೂರು 'ಯೂತ್ ನೈಟ್'ಗಳ ಒಂದು ಹಿನ್ನೋಟ ನಮ್ಮೆಲ್ಲರಿಗೂ, ವಿಶೇಷವಾಗಿ ಅನೇಕ ನವ ಸದಸ್ಯರಿಗೂ, ಅದರ ಬಗ್ಗೆ ಸೂಕ್ತ ವಿವರ ನೀಡಬಹುದು.

- ಮೊಟ್ಟ ಮೊದಲ 'ಯೂತ್ ನೈಟ್' ಕಾರ್ಯಕ್ರಮ 2003 ರಲ್ಲಿ ನಡೆಯಿತು. Theme: Journey through India. ಕಾರ್ಯಕ್ರಮದಲ್ಲಿ ಕರ್ನಾಟಕ ಒಳಗೊಂಡು ಭಾರತದ ಅನೇಕ ರಾಜ್ಯಗಳಿಗೆ ಸಂಬಂಧಿಸಿದಂತಹ ಅನೇಕ ಹಾಡು ನೃತ್ಯಗಳು, ಹಾಸ್ಯ ಪ್ರಹಸನಗಳು, ಫ್ಯಾಶನ್–ಶೋ ಗಳಿದ್ದವು
- 2004ರಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ (Theme: A Patriotic tribute to India) ಸಂಗೀತ, ನೃತ್ಯ, ಹಾಸ್ಯ ಪ್ರಹಸನ ಒಳಗೊಂಡಂತೆ ಸುಮಾರು 12 ಕಾರ್ಯಕ್ರಮಗಳಿದ್ದವು. ಭಾರತ ಸ್ವಾತಂತ್ರ್ಯ ಹೋರಾಟಗಾರರಂತೆ ವೇಷ ಧರಿಸಿ ಬಂದ ಮಕ್ಕಳ ಪ್ರದರ್ಶನ ಸಹಾ ಇತ್ತು.
- 'ಚಿಗುರು' ಎಂಬ ಕೂಟದ ಮಕ್ಕಳ, ಯುವಕರ ಕಾರ್ಯಕ್ರಮ 2005ರಲ್ಲಿ ನಡೆಯಿತು. ಈ ಹಿಂದೆ ನಡೆದ ಕಾರ್ಯಕ್ರಮಗಳಿಗಿಂತ ಚಿಕ್ಕದಾದರೂ ಇದರಲ್ಲಿ ಒಂದು ವಿಶೇಷತೆ ಇತ್ತು. ಕುವೆಂಪುರವರ ಗೀತೆ ಮತ್ತು ಹಲವಾರು ಚಿತ್ರಗೀತೆಗಳಿಗೆ ಅಳವಡಿಸಿದ ನೃತ್ಯಗಳನ್ನು ಸೇರಿ ನಡೆದ ಎಲ್ಲಾ (ಸುಮಾರು 10) ಕಾರ್ಯಕ್ರಮಗಳು ಕನ್ನಡದಲ್ಲೇ ಇದ್ದವು.
- 2006ರಲ್ಲಿ ಈ ಕಾರ್ಯಕ್ರಮ ನಡೆಯಲಿಲ್ಲ.

ಕೂಟದ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿಗೆ ಕೂಟದ ವೆಬ್‌ಸೈಟ್‌ಗೆ ಭೇಟಿ ನೀಡಿ.

## Dance Performance at GANESHA PROGRAM

We are in the process of arranging cultural events for Ganesha Habba Program (Sept. 22nd). One of the items that has been arranged is a **dance performance** by renowned husband-wife dance duo, **Shama and Sanjay**.

### About the Artists



**Sanjay Shantaram** – *Dance remained his passion and thus became his profession.*Sanjay, a child prodigy, has also acted in more than 50 Kannada and Telugu films as a child actor and in many tele-serials.

**Shama Sanjay:** *Dance, synonym to her life.* Shama is a well known face on the small screen (Kusuma in Kusumaanjali on Udaya TV). She has been acting in many tele-serials since 1994.

In their performance, Shama and Sanjay will showcase the beauty of both the traditional styles - Kuchipudi and Bharatanatyam.
-VKK EC



## ಹೊಸ ರುಚಿ



### ಮಸಾಲ ಮಜ್ಜಿಗೆ

ಸುಮಾ ರಾಜಾಶಂಕರ್, ಅರೋರ

#### ಬೇಕಾದ ಪದಾರ್ಥಗಳು

- ೧ ಲೀಟರ್ ಮೊಸರು
- ೧ ಟೇಬಲ್ ಚಮಚ ಹಸಿ ಶುಂಠಿ
- ೪–೫ ಚಿಟಿಕೆ ಹಿಂಗು
- ೧ ಹಿಡಿ ಕೊತ್ತಂಬರಿ ಸೊಪ್ಪು
- ೨–೩ ಮೆಣಸಿನಕಾಯಿ
- ಉಪ್ಪು ರುಚಿಗೆ ತಕ್ಕಂತೆ
- ೪–೫ ಲೀಟರ್ ನೀರು
- ಸ್ವಲ್ಪ ಐಸ್

#### ಮಾಡುವ ವಿಧಾನ

೧. ಹಸಿ ಶುಂಠಿಯನ್ನು ತುರಿದುಕೊಳ್ಳಿ

೨. ಕೊತ್ತಂಬರಿ ಸೊಪ್ಪು ಮತ್ತು ಮೆಣಸಿನಕಾಯಿಯನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ

೩. ಹಿಂಗು, ಹಸಿ ಶುಂಠಿ, ಕೊತ್ತಂಬರಿ ಸೊಪ್ಪು ಮತ್ತು ಮೆಣಸಿನಕಾಯಿಯನ್ನು ಮೊಸರೊಡನೆ ಬೆರಸಿ

೪. ಮೊಸರಿಗೆ ೪–೫ ಲೀಟರ್ ನೀರು ಬೆರೆಸಿ

೫. ರುಚಿಗೆ ಉಪ್ಪನ್ನು ಬೆರೆಸಿ ಚೆನ್ನಾಗಿ ಕಲಕಿ

೬. ತಂಪಾಗಿಡಲು ಅದಕ್ಕೆ ಐಸ್ ಹಾಕಿಡಿ

## ಕವನ

### ಎದೆ ತುಂಬಿ ಹಾಡಿದೆನು

ಕವಿ : ಪ್ರೊ. ಜಿ. ಎಸ್. ಶಿವರುದ್ರಪ್ಪ

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು

ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡುಹಕ್ಕಿಗೆ ಬೇಕೆ ಬಿರುದು ಸನ್ಮಾನ

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ನನಗೆ

ಕೇಳುವವರಿಹರೆಂದು ನಾ ಬಲ್ಲೆ ಅದರಿಂದ
ಹಾಡುವೆನು ಮೈದುಂಬಿ ಎಂದಿನಂತೆ
ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು

◆◆◆

## 2007 Membership Registration Information

In continuation with the list of members presented in last issue of Dindima, listed below are members who have registered with VKK since July 1, 2007. We welcome the following new and renewing members into VKK membership fold.

- *Chaitra Chandrashekar (New)*
- *Mythra & Ramalingappa Nagaraju*
- *Sudheer Holenarasipura (New)*

## ನಗೆ ಬುಗ್ಗೆ

### ತಿಂಮನ ಪುರಾವೆ

ತಿಂಮ ಎಂ.ಪಿ. ಆದ. ಅನಂತರ ಕ್ಯಾಬಿನೆಟ್ ಮಿನಿಸ್ಟರಾದ. ಅಮೇರಿಕಾಕ್ಕೆ ಹೋಗಿ ಅಲ್ಲಿನ ಅಧ್ಯಕ್ಷ ಕ್ಲಿಂಟನ್‌ನ ಸಹಾ ಭೆಟ್ಟಿಯಾದ.

ಹೀಗೆ ಕ್ಲಿಂಟನ್‌ನ ಜೊತೆ ಮಾತಾನಾಡು–ತ್ತಿರುವಾಗ ಕ್ಲಿಂಟನ್ ಅಮೇರಿಕಾ ಎಷ್ಟು ಮುಂದುವರೆದ ದೇಶ ಎಂದು ತೋರಿಸಲು ತಿಂಮನನ್ನು ವೈಟ್ ಹೌಸ್ ಹಿಂದೆ ಕರೆದೊಯ್ದ. ಅಲ್ಲಿ ತನ್ನ ಆಳಿನ ಕೈಲಿ ಭೂಮಿ ಅಗೆಸಲಾರಂಭಿಸಿದ. ನೂರು ಅಡಿ ಅಗೆದ ಮೇಲೆ, ತಿಂಮನಿಗೆ, 'ಕೆಳಗೆ ಹೋಗಿ ನೋಡು, ಏನು ಕಾಣಿಸುತ್ತೆ ಹೇಳು', ಎಂದ. ತಿಂಮ ಅಲ್ಲಿ ಹೋಗಿ ನೋಡಿದ. ಅನೇಕ **ವೈರ್**(ಕೇಬಲ್)ಗಳನ್ನು ಕಂಡ. ಅದನ್ನು ಬಂದು ಕ್ಲಿಂಟನ್‌ಗೆ ತಿಳಿಸಿದ. ಕ್ಲಿಂಟನ್, ಜಂಭದಿಂದ, 'ನೋಡು ತಿಂಮ, ನೂರು ವರ್ಷದ ಹಿಂದೆಯೇ ನಾವು ಟೆಲಿಫೋನ್ ಉಪಯೋಗಿಸುತ್ತಿದ್ದೆವು. ಈ ವೈರ್‌ಗಳೇ ಅದಕ್ಕೆ ಪುರಾವೆ'. ತಿಂಮ ದಂಗಾಗಲಿಲ್ಲ

ಭಾರತಕ್ಕೆ ವಾಪಸ್ಸಾದ ನಂತರ ಕ್ಲಿಂಟನ್‌ಗೆ ಬರಹೇಳಿದ. ಬಂದ ಕ್ಲಿಂಟನ್‌ನನ್ನು ಮನೆ ಹಿಂದೆ ಕರೆದೊಯ್ದ. ಅಲ್ಲಿ ತನ್ನ ಆಳಿನ ಕೈಲಿ ಭೂಮಿ ಅಗೆಸಲಾರಂಭಿಸಿದ. ನೂರು ಅಡಿ ಅಗೆದ ಮೇಲೆ, ಕ್ಲಿಂಟನ್‌ಗೆ 'ಕೆಳಗೆ ಹೋಗಿ ನೋಡು, ಏನು ಕಾಣಿಸುತ್ತೆ ಹೇಳು', ಕ್ಲಿಂಟನ್ ಹೋಗಿ ನೋಡಿದ. 'ಬರಿ ಮಣ್ಣು, ಕಲ್ಲು'. ಸರಿ, ತಿಂಮ ಇನ್ನೂ ನೂರು ಅಡಿ ಅಗೆಸಿದ ಮತ್ತೆ ಕ್ಲಿಂಟನ್ ನೋಡಿ ಹೇಳಿದ, 'ಬರಿ ಮಣ್ಣು, ಕಲ್ಲು', ಸರಿ ಹೀಗೆ ಸಾಗಿತು. ಐನೂರು ಅಡಿ ಅಗೆದ ಮೇಲೆ, ಮತ್ತೆ ನೋಡಿ ಕ್ಲಿಂಟನ್ ಹೇಳಿದ, 'ಏನೂ ಇಲ್ವಲ್ಲ. ನನಗೆ ನೋಡಿ ನೋಡಿ ಸಾಕಾಯಿತು'. ತಿಂಮ ಹೇಳಿದ, 'ಈಗ ಗೊತ್ತಾಯಿತಾ ಬಿಲ್, ನಾವು ಐನೂರು ವರ್ಷಗಳಿಂದ ವೈರ್‌ಲೆಸ್ ಟೆಲಿ ಫೋನ್‌ಗಳನ್ನು ಉಪಯೋಗಿಸುತ್ತಿದ್ದೇವೆ ಎಂದು'. ಕ್ಲಿಂಟನ್ ದಂಗಾದ.

– ಕೆ. ರಾಜಾಶಂಕರ್

ಡಿಂಡಿಮದಲ್ಲಿ ಪ್ರಕಟಸಲಿಚ್ಛಿಸುವ ನಿಮ್ಮ ಲೇಖನ, ಕವನ, ಅಭಿಪ್ರಾಯ, ಮುಂತಾದುವುಗಳನ್ನು ಪತ್ರಿಕೆಯ ಸಂಪಾದಕರಿಗೆ ಕಳುಹಿಸಿ.

*email:*
*dindima@vidyaranyakannadakuta.org*

## ಕೊನೆ ಹನಿ!

### ಅದೃಷ್ಟ ಒಮ್ಮೆ ಕದ ತಟ್ಟುತ್ತದೆ

ಅದೃಷ್ಟ ಒಮ್ಮೆ ಮಾತ್ರ ನಿಮ್ಮ ಕದ ತಟ್ಟುವುದಂತೆ (Fortune knocks on your door only once). ಉಳಿದ ಕಾಲದಲ್ಲಿ ಕದ ತಟ್ಟುವವರು ನಿಮ್ಮ ನೆರೆ'**ಹೊರೆ**'ಯವರಂತೆ. ಇದನ್ನು ಕೇಳಿದ ಶ್ರೀಮಾನ್ ಘಾ, ಇದಕ್ಕಿಂತ ಉತ್ತಮವಾದ್ದನ್ನು ಕೊಡುವುದಾಗಿ ಹೇಳಿ ಮತ್ತೊಂದು 'ಕಾಮೆಂಟ'ನ್ನು ಉದ್ಧರಿಸಿದರು:

Fortune knocks on your door once; next time he sends his daughter (ಅದೃಷ್ಟ ಒಮ್ಮೆ ನಿಮ್ಮ ಕದ ತಟ್ಟೀತು. ಆ ಮೇಲೆ ತನ್ನ ಮಗಳನ್ನು ಕಳುಹಿಸುತ್ತೆ).

ಏನು 'ಜೋಕ್?' ಎಂದು ಕೇಳಲಾಗಿ ಶ್ರೀಮಾನ್ ಘಾ ದುರುಗುಟ್ಟಿ ನೋಡಿ. ಇಷ್ಟೂ ತಿಳಿಯದೆ? Fortuneನ ಮಗಳು ಯಾರು? Miss Fortune ಅಥವಾ Mis-fortune ಅಲ್ಲವೆ? ಎಂದರು.

(ಮಿಸ್ ಫಾರ್ಚೂನ್ ಎಂದರೆ ಫಾರ್ಚೂನ್‌ನ ಮಗಳು ಮಾತ್ರ ಅಲ್ಲ. ದುರದೃಷ್ಟ ಎಂದಾಗುವುದಿಲ್ಲವೆ?).

–ವೈಎನ್ಕೆ ಅವರ **ಜೋಕ್ ಫಾಲ್ಸ್**ನಿಂದ